ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 1 ಸಂಚಿಕೆ 6 22, ಏಪ್ರಿಲ್ 1979 40 ಪೈಸೆ

ನ್ಯಾಯ ಪರಿಪಾಲನೆ

ಪೋಲೀಸ್ ಇಲಾಖೆ ಇರುವುದು ನ್ಯಾಯಪರಿಪಾಲನೆಗಾಗಿ; ಶಾಂತಿಯನ್ನು ಕಾಪಾಡುವುದಕ್ಕಾಗಿ. ಆದರೆ ಭೂಮಾಲಕ-ಬಂಡವಾಳಗಾರ ವರ್ಗಗಳ ಹಿತವನ್ನು ರಕ್ಷಿಸುವ ವ್ಯವಸ್ಥೆಯಲ್ಲಿ ಪ್ರಭುತ್ವದ ಅಂಗವಾಗಿರುವ ಪೋಲೀಸರಿಂದ ನಿಜವಾಗಿಯೂ ನ್ಯಾಯಪರಿಪಾಲನೆಯು ಅಸಾಧ್ಯ. ಇತರೆಲ್ಲ ವಿಚಾರಗಳಂತೆ, ಪೋಲೀಸರೂ ಆಳುವ ವರ್ಗಗಳಿಗೆ ಅನುಕೂಲವಾಗಿ ವರ್ತಿಸುತ್ತಾರೆ. ಇದು ಚಾರಿತ್ರಿಕವಾಗಿ ಸ್ಪಷ್ಟವಾಗಿದೆ.

ಕರ್ನಾಟಕ ರಾಜ್ಯದಲ್ಲಂತೂ ಈಗೀಗ ಪೋಲೀಸ್ ಇಲಾಖೆಯವರು ಸರಕಾರದ ಪರವಾಗಿ, ಶೋಷಕರ ಪರವಾಗಿ ಕೆಲಸ ಮಾಡುವುದು ಎಲ್ಲೆಲ್ಲೂ ಕಂಡುಬಂದಿದೆ. ಸಮಾಜವಾದದ ಬಗ್ಗೆ ಬೊಬ್ಬಿಡುವ ದೇವರಾಜ ಅರಸ್ ಸರಕಾರವು ಪೋಲೀಸ್ ಇಲಾಖೆಯನ್ನು ಜನವಿರೋಧಿ ಕೆಲಸಕ್ಕೆ ಬಳಸುತ್ತಲಿದೆ. ಜನರ ಹೋರಾಟವನ್ನು ದಮನ ಮಾಡಲು ಪೋಲೀಸರನ್ನು ಬಳಸಲಾಗುತ್ತಿದೆ. ಇಂದಿರಾಗಾಂಧಿಯವರ ಬಂಧನವಾದ ಹಿನ್ನೆಲೆಯಲ್ಲಿ ರಾಜ್ಯದಾದ್ಯಂತ ನಡೆದ ಸಂಘಟಿತ ಪುಂಡಾಟಿಕೆ ಸಂದರ್ಭ ಪೋಲೀಸರ ನಿಷ್ಕ್ರಿಯತೆ ಜನತೆಗೆ ಭಯವನ್ನು ಮೂಡಿಸಿತ್ತು. ವಿರೋಧ ಪಕ್ಷದ ಮುಂದಾಳು ಶ್ರೀ ಎ.ಕೆ. ಸುಬ್ಬಯ್ಯ ಅವರ ನಿವಾಸದ ಮೇಲೆ ಪೋಲೀಸರು ಪ್ರೇಕ್ಷಕರಾಗಿ ಇದ್ದಂತೆಯೇ ಗೂಂಡಾ ದಾಳಿ ನಡೆದಿತ್ತು. ಕೊಡಗಿನ ತಿತಿಮತಿಯಲ್ಲಿ ಅರಣ್ಯಾಧಿಕಾರಿಗಳೊಡಗೂಡಿ ಪೋಲೀಸರೂ ಇದ್ದು ರೈತರ ಮನೆಗಳು

ಸಂಪಾದಕೀಯ

ನಾಶವಾಯಿತು. ಬೆಂಗಳೂರಿನ ಬನಶಂಕರಿಯಲ್ಲಿ ಕೊಳಚೆವಾಸಿಗಳ 480 ಮನೆಗಳನ್ನು ಪೋಲೀಸರ ಇದಿರೇ ನಾಶಮಾಡಲಾಯಿತು. ಕೊಳಚೆ ವಾಸಿಗಳನ್ನು ಮೋಸ ಮಾಡಿದವರ ಮೇಲೆ ಕ್ರಮ ವಹಿಸುವ ಬದಲು, ಕೊಳಚೆ ವಾಸಿಗಳಿಗೆ ಧೈರ್ಯ ಹೇಳಿದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರೂ ಸೇರಿ ಎಂಟು ಮಂದಿಯನ್ನು ಬಂಧಿಸಲಾಯ್ತು.

ಕಾನೂನೆಂದರೆ ಎಲ್ಲರಿಗೂ ಸಮಾನವಾಗಿರಬೇಕು. ಕಾನೂನು ಪ್ರಕಾರ ನಡೆಯದಿದ್ದಲ್ಲಿ ಯಾರೇ ಆಗಲಿ, ಅಂತಹ ವ್ಯಕ್ತಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಇದಕ್ಕೆ ವ್ಯತಿರಿಕ್ತವಾಗಿ ನಡೆಯುತ್ತಲಿದೆ. ಸರಕಾರದ ಮತ್ತು ಮಾಲಕರ ಕಾರ್ಮಿಕ ವಿರೋಧಿ ನೀತಿಗಿದಿರಾಗಿ ಸಂಘಟಿತ ಪ್ರಜಾಸತ್ತಾತ್ಮಕ ಚಳವಳಿ ನಡೆಸುವಾಗೆಲ್ಲಾ ಪೋಲೀಸರು ಕಾರ್ಮಿಕರ ಮೇಲೆ ಆಕ್ರಮಣ ಮಾಡುತ್ತಲಿದ್ದಾರೆ. ಕೆಲವು ದಿನಗಳ ಹಿಂದೆ ಬೆಂಗಳೂರಲ್ಲಿರುವ ದೊಡ್ಡದಾದ ಮೈಕೋ ಕಾರ್ಮಿಕರ ಮೇಲೆ ವಿನಾ ಕಾರಣ ಲಾಠಿಚಾರ್ಜು ಮಾಡಿ ಅಶ್ರುವಾಯು ಪ್ರಯೋಗಿಸಲಾಯ್ತು. ಹತ್ತಾರು ಕಾರ್ಮಿಕರು ಆಸ್ಪತ್ರೆಗೆ ಸೇರುವಂತಾಯಿತು. ಬೆಂಗಳೂರಿನ ರಾಮಯ್ಯ ಇಂಡಸ್ಟ್ರಿಯಲ್ ಎಸ್ಟೇಟಿನ ಕಾರ್ಮಿ

[8ನೇ ಪುಟ ನೋಡಿ]

ಮೈಕೋ ಕಾರ್ಮಿಕರ ಮೇಲೆ ಲಾಠಿ ಪ್ರಹಾರ

ಐಕ್ಯ ಹೋರಾಟಕ್ಕೆ ಕಾರ್ಮಿಕರ ನಿರ್ಧಾರ

ಏಳು ಸಹಸ್ರ ಕಾರ್ಮಿಕರು ದುಡಿಯುವ ಬೆಂಗಳೂರಿನ ಮೈಕೋ ಕಾರಖಾನೆಯಲ್ಲಿ ಸಿ.ಐ.ಟಿ.ಯು.ವಿನ ರಾಜ್ಯ ಘಟಕದ ಅಧ್ಯಕ್ಷ ಕಾಂ. ಎಸ್. ಸೂರ್ಯನಾರಾಯಣರಾವ್ ಇವರು ಯೂನಿಯನ್ನಿನ ಅಧ್ಯಕ್ಷರಾದದ್ದು ಮ್ಯಾನೇಜ್‌ಮೆಂಟಿಗೆ ನುಂಗಲಾಗದ ತುತ್ತು. ಅಪಾರ ಲಾಭವನ್ನು ಗಿಟ್ಟಿಸುವ ಈ ಕಂಪೆನಿಯಲ್ಲಿ ಯೂನಿಯನ್ನಿನ ಹೊಸ ನಾಯಕತ್ವದಲ್ಲಿ ಕಾರ್ಮಿಕರು ತಮ್ಮ ನ್ಯಾಯವಾದ ಬೇಡಿಕೆಗಳನ್ನು ಮುಂದಿಡಲು ಪ್ರಾರಂಭಿಸಿದರು. ಸಿಂಗ್ ಎಂಬ ಒಬ್ಬ ಮ್ಯಾನೇಜರ್ ಕಾರ್ಮಿಕರನ್ನು ಧಿಕ್ಕರಿಸಿ ಮಾತನಾಡಿದಾಗ ಕಾರ್ಮಿಕರು ಪ್ರತಿಭಟಿಸಿದರು. ಸಂದರ್ಭ ಕಾಯುತ್ತಲಿದ್ದ ಮ್ಯಾನೇಜ್‌ಮೆಂಟ್ ಏಳುಮಂದಿ ಯೂನಿಯನ್ನು ಮುಂದಾಳುಗಳನ್ನು ಕೆಲಸದಿಂದ ಅಮಾನತುಗೊಳಿಸಿತು. ಇದರಿಂದ ರೊಚ್ಚಿಗೆದ್ದ ಕಾರ್ಮಿಕರು ಕೆಲಸ ನಿಲ್ಲಿಸಿ ಪ್ರತಿಭಟನೆ ಮಾಡಿದಾಗ ಪೋಲೀಸರನ್ನು ಕರೆಸಲಾಯಿತು.

ಹತ್ತಾರು ವೇನ್‌ಗಳಲ್ಲಿ ಬಂದ ನೂರಾರು ಪೋಲೀಸರು ಶಾಂತಿಯುತವಾಗಿ ಪ್ರತಿಭಟಿಸುತ್ತಿದ್ದ ಸಹಸ್ರಾರು ಕಾರ್ಮಿಕರ ಮೇಲೆ ಅಮಾನುಷವಾಗಿ ಲಾಠಿಪ್ರಹಾರ ಅಶ್ರುವಾಯು ನಡೆಸಿದರು. ಪರಿಣಾಮ, ನೂರಾರು ಕಾರ್ಮಿಕರು ಆಸ್ಪತ್ರೆಗೆ ಸೇರುವಂತಾಯಿತು. ಕಂಪೆನಿಯ ಮ್ಯಾನೇಜ್‌ಮೆಂಟು ಲಾಕ್‌ಔಟ್ ಘೋಷಿಸಿತು.

ಪೋಲೀಸರ ಅಮಾನುಷ ವರ್ತನೆ, ಮಾಲಕರಿಗೆ ಸಹಾಯ ಮಾಡುವುದರ ಬಗ್ಗೆ ವಿಧಾನಸಭೆಯಲ್ಲಿ ಬಿರುಸಾದ ಚರ್ಚೆಯೂ ನಡೆಯಿತು. ಮೈಕೋದ ಸಹಸ್ರಾರು ಕಾರ್ಮಿಕರು ಏನೇ ಆದರೂ ಮ್ಯಾನೇಜ್‌ಮೆಂಟಿನ ಕಾರ್ಮಿಕ ವಿರೋಧಿ ಧೋರಣೆ ವಿರುದ್ಧ ಮತ್ತು ಕೆಲಸದಿಂದ ಅಮಾನತುಗೊಳಿಸಿದವರನ್ನು ಹಿಂತೆಗೆದುಕೊಂಡು, ಮ್ಯಾನೇಜರ್ ಸಿಂಗನ್ನು ವರ್ಗಾಯಿಸುವತನಕ ಹೋರಾಡಲು ಮುಂದಾಗಿರುವರು. ಎಲ್ಲಾ ವಿರೋಧಪಕ್ಷಗಳ ಮುಖಂಡರುಗಳೂ, ಕಾರ್ಮಿಕ ಸಂಘಟನೆಗಳೂ ಮೈಕೋ ಕಾರ್ಮಿಕರ ಹೋರಾಟಕ್ಕೆ ಬೆಂಬಲವಿತ್ತಿರುವರು. ಮೈಕೋ ಕಾರ್ಮಿಕರ ಹೋರಾಟಕ್ಕೆ ಸೌಹಾರ್ದ ಬೆಂಬಲ ನೀಡಲು ಕಾರ್ಮಿಕ ಸಂಘಟನೆಗಳ ಸಮನ್ವಯ ಸಮಿತಿಯನ್ನು 17 ರಂದು ರಚಿಸಲಾಗಿದೆ. 18-4-79 ರಂದು ಮನೆಯ ಹೆಂಗಸರೂ ಸೇರಿದಂತೆ ಆರೇಳು ಸಹಸ್ರ ಕಾರ್ಮಿಕರ ಬೃಹತ್ ಮೆರವಣಿಗೆ ವಿಧಾನಸೌಧಕ್ಕೆ ತೆರಳಿ ಗವರ್ನರ್ ಅವರಿಗೂ, ರಾಜ್ಯದ ಕಾರ್ಮಿಕ ಮಂತ್ರಿ ಮತ್ತು ಉದ್ಯಮಮಂತ್ರಿಯವರುಗಳಿಗೂ ಮನವಿಪತ್ರವನ್ನು ಅರ್ಪಿಸಿತು. ಬಹಿರಂಗಸಭೆಯಲ್ಲಿ ಮಾತನಾಡಿದ ಮುಖಂಡರುಗಳು, ಕಾರ್ಮಿಕರ ಬೇಡಿಕೆ ಈಡೇರದಿದ್ದರೆ ಬೆಂಗಳೂರು ಬಂದ್ ಆಚರಿಸಲೂ ಕರೆಯಿತ್ತರು. ಕಾರ್ಮಿಕರ ಐಕ್ಯತೆ, ಹೋರಾಟ ಮುಂದುವರೆದಿದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿ ಸೆಕ್ರೆಟೇರಿಯಟ್ ಈ ಹೋರಾಟಕ್ಕೆ ಸಂಪೂರ್ಣ ಬೆಂಬಲವನ್ನಿತ್ತಿದೆ.

ಐಕ್ಯ ಚಳುವಳಿಯ ಇತಿಹಾಸದಲ್ಲಿ ಒಂದು ಮೈಲುಗಲ್ಲು

ಸಿ. ಐ. ಟಿ. ಯು. ನಾಲ್ಕನೆಯ ಅಖಿಲಭಾರತ ಸಮ್ಮೇಳನ

ಏಪ್ರಿಲ್ 11ರಂದು ಪ್ರಾರಂಭವಾಗಿ 15ರಂದು ಬೃಹತ್ ಮೆರವಣಿಗೆ ಮತ್ತು ಬಹಿರಂಗ ಸಭೆಗಳಿಂದ ಮುಕ್ತಾಯಗೊಂಡ ಸಿ.ಐ.ಟಿ.ಯು.ವಿನ ನಾಲ್ಕನೆಯ ಅಖಿಲ ಭಾರತ ಸಮ್ಮೇಳನವು ಚಾರಿತ್ರಿಕವಾಗಿತ್ತು; ಕಾರ್ಮಿಕ ವರ್ಗದ ಐಕ್ಯಚಳುವಳಿಯ ಇತಿಹಾಸದಲ್ಲಿ ಒಂದು ಮೈಲುಗಲ್ಲನ್ನು ಸ್ಥಾಪಿಸಿತು. 11ರಂದು ಮಧ್ಯಾಹ್ನ 3-30ಕ್ಕೆ ಕಾಂ. ಬಿ. ಟಿ. ರಣದಿವೆಯವರಿಂದ ಧ್ವಜಾರೋಹಣ ನಡೆದು ಸಮ್ಮೇಳನ ಪ್ರಾರಂಭವಾಯಿತು. ಸ್ವಾಗತ ಸಮಿತಿಯ ಅಧ್ಯಕ್ಷ ಕಾಂ. ವಿ. ಪಿ. ಚಿಂತನ್ ಅವರು ಸ್ವಾಗತ ಭಾಷಣ ಮಾಡುತ್ತಾ ಕಾರ್ಮಿಕರು ನಡೆಸಿದ ಅಮೋಘ ಹೋರಾಟಗಳನ್ನು ಸ್ಮರಿಸಿದರು. "ರಾಜ್ಯದ ಎ. ಐ. ಎ. ಡಿ. ಎಮ್. ಕೆ. ಸರಕಾರ ಅನುಸರಿಸಿದ ಕಾರ್ಮಿಕ ವಿರೋಧಿ ಧೋರಣೆಯಿಂದಾಗಿ ತಮಿಳುನಾಡಿನಲ್ಲಿ ನಾವು ಅಡೆತಡೆಗಳನ್ನು, ಸವಾಲುಗಳನ್ನು ಬಿಡೆಬಿಡದೆ ಎದುರಿಸಬೇಕಾಯಿತು. 1978ರ ಅಕ್ಟೋಬರ್ 23ರಂದು ವಿಶಾಲ ತಳಹದಿಯಲ್ಲಿ ದಬ್ಬಾಳಿಕೆಗೆ ವಿರೋಧ ಪ್ರತಿಭಟನೆ ಮಾಡಿದಾಗ 20,000 ಜನರ ಬಂಧನವಾಯಿತು. ಐಕ್ಯಹೋರಾಟಕ್ಕೆ ಮತ್ತು ಸೌಹಾರ್ದ ಕೊಡುವುದರಲ್ಲಿ ಸಿ. ಐ. ಟಿ. ಯು. ಮುಂದಾಗಿದೆ." ಎಂದರು.

ಹುತಾತ್ಮರಿಗೆ ಶ್ರದ್ಧಾಂಜಲಿಯನ್ನರ್ಪಿಸಿದ ಮೇಲೆ ಕಾಂ. ಬಿ. ಟಿ. ರಣದಿವೆಯವರು ಅಧ್ಯಕ್ಷ ಭಾಷಣ ಮಾಡಿದರು. ಜಾಗತಿಕ ರಾಜಕೀಯ ಪರಿಸ್ಥಿತಿ, ಪಾಕಿಸ್ತಾನ ಮತ್ತು ಬಾಂಗ್ಲಾದೇಶದಲ್ಲಿನ ಬೆಳವಣಿಗೆ, ಸರ್ವಾಧಿಕಾರ ಶಕ್ತಿಗಳು, ಬೆಳೆಯುತ್ತಿರುವ ಅಸಮಾನತೆ, ಶ್ರಮಜೀವಿಗಳ ವೇತನದ ಮೇಲೆ ದಾಳಿ, ಹೆಚ್ಚುತ್ತಿರುವ ಬಡತನ, ನಿರುದ್ಯೋಗ, ಸಣ್ಣಕೈಗಾರಿಕೆಗಳ ಪರಿಸ್ಥಿತಿ, ಬೆಲೆಗಳು ಮತ್ತು ಸರಕಾರದ ಧೋರಣೆಗಳು, ಮುಷ್ಕರಗಳು ಮತ್ತು ಬೀಗಮುದ್ರೆಗಳು, ಆರ್ಥಿಕ ಅವಲಂಬನೆ, ದಬ್ಬಾಳಿಕೆ, ಕಾರ್ಮಿಕವರ್ಗ ಮತ್ತು ರೈತರು, ಮಹಿಳೆಯರು, ಪಶ್ಚಿಮ ಬಂಗಾಳ, ಕಾರ್ಮಿಕ ಸಂಘಗಳ ಐಕ್ಯತೆ ಈ ವಿಷಯಗಳ ಬಗ್ಗೆ ಕಾಂ. ಬಿ.ಟಿ. ಆರ್. ಮಾತನಾಡಿದರು.

ಸಮಾಜವಾದಿ ರುಮೇನಿಯದ ಕಾರ್ಮಿಕ ಸಂಘದ ಪ್ರತಿನಿಧಿಗಳಿಬ್ಬರು, ಸಮಾಜವಾದಿ ವಿಯೆಟ್ನಾಮಿನ ಕಾರ್ಮಿಕ ಸಂಘದ ಸಂದೇಶವನ್ನು ತಂದ ನವದೆಹಲಿಯಲ್ಲಿರುವ ವಿಯೆಟ್ನಾಂ ರಾಯಭಾರ ಕಛೇರಿಯ ಪ್ರಥಮ ಕಾರ್ಯದರ್ಶಿ, ಐ. ಎಲ್. ಒ. ಪ್ರತಿನಿಧಿ, ಎ. ಐ. ಟಿ. ಯು. ಸಿ. ಯ ನಾಲ್ವರು ಪ್ರತಿನಿಧಿಗಳು ಸಮ್ಮೇಳನದಲ್ಲಿ ಹಾಜರಿದ್ದರು. ವರ್ಲ್ಡ್ ಫೆಡರೇಷನ್ ಆಫ್ ಟ್ರೇಡ್ ಯೂನಿಯನ್ಸ್ ಪ್ರಧಾನ ಕಾರ್ಯದರ್ಶಿ, ಸೋವಿಯೆತ್ ಒಕ್ಕೂಟಗಳ ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ, ಆಲ್ ಚೈನಾ ಫೆಡರೇಷನ್ ಆಫ್ ಟ್ರೇಡ್‌ಯೂನಿಯನ್ಸ್ ಉಪಾಧ್ಯಕ್ಷ, ಜಪಾನಿನ ಕಾರ್ಮಿಕ ಸಂಘಟನೆ 'ಸೋಹಿಯೋ' ದ ಅಧ್ಯಕ್ಷ, ಇಟೆಲಿಯ ಸಿ. ಜಿ. ಐ. ಎಲ್. ಪ್ರಧಾನ ಕಾರ್ಯದರ್ಶಿ, ಉತ್ತರ ಕೊರಿಯದ ಕಾರ್ಮಿಕಸಂಘ, ಬ್ರಿಟಿಷ್ ಟ್ರೇಡ್ ಯೂನಿಯನ್ ಕೌನ್ಸಿಲ್ ಸಮ್ಮೇಳನಕ್ಕೆ ಶುಭ ಕೋರಿ ಕಳುಹಿಸಿದ ಸಂದೇಶಗಳನ್ನು ಕಾಂ. ಎಂ. ಕೆ. ಪಂಧೆಯವರು ಓದಿದರು. ಸಿ. ಐ. ಟಿ. ಯು. ವಿನ ಅಸ್ತಿತ್ವದ ಈ ಒಂಭತ್ತು ವರ್ಷಗಳ ಅವಧಿಯಲ್ಲಿ, ಭಾರತದ ಸಮರಶೀಲ ಕಾರ್ಮಿಕ ಚಳುವಳಿಯೊಂದಿಗೆ ಸಂಪರ್ಕವನ್ನಿಟ್ಟುಕೊಳ್ಳಬೇಕಾದರೆ ಸಿ. ಐ. ಟಿ. ಯು. ವನ್ನು ಹೊರತುಪಡಿಸಿ ಅದು ಸಾಧ್ಯವಿಲ್ಲ ಎಂಬ ಅರಿವು ಪರದೇಶಗಳ ಕಾರ್ಮಿಕ ಮುಖಂಡರಿಗೆ ತಡವಾಗಿಯಾದರೂ ಬಂದಿರುವುದು ಈ ಸಂದೇಶಗಳಿಂದ ವ್ಯಕ್ತವಾಗುತ್ತಿತ್ತು.

ಸಾರಿಗೆ ಮತ್ತು ಮೀನುಗಾರಿಕೆಯ ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಪ್ರಧಾನ ಕಾರ್ಯದರ್ಶಿ ದೇವಕುಮಾರ ಗಂಗೂಲಿ, ಬ್ರಿಟನ್ನಿನಲ್ಲಿರುವ ಭಾರತೀಯ ಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿ, ಮಾರಿಷಸ್‌ನ ಪ್ಲಾಂಟೇಷನ್ ಕಾರ್ಮಿಕ ಸಂಘದ ಅಧ್ಯಕ್ಷ, ಆಲ್ ಇಂಡಿಯಾ ರೈಲ್ವೆಮೆನ್ ಫೆಡರೇಷನ್ನಿನ ಪ್ರಧಾನ ಕಾರ್ಯದರ್ಶಿ, ಫೆಡರೇಷನ್ ಆಫ್ ಸೆಂಟ್ರಲ್ ಗೌರ್ನಮೆಂಟ್ ಎಂಪ್ಲಾಯೀಸ್ ಅಂಡ್ ವರ್ಕರ್ಸ್‌ನ ಪ್ರಧಾನ ಕಾರ್ಯದರ್ಶಿಯಾಸ್, ವಾಣಿಜ್ಯದಅಂತರರಾಷ್ಟ್ರೀಯ ಕಾರ್ಮಿಕಸಂಘ, ಅಖಿಲ ಭಾರತ ವಿಶ್ವವಿದ್ಯಾಲಯಗಳ ನೌಕರರ ಫೆಡರೇಷನ್, ಸಿಂಹಳದ 'ಸಿಲೋನ್ ಫೆಡರೇಷನ್ ಆಫ್ ಲೇಬರ್', ಆಲ್ ಇಂಡಿಯಾ ನ್ಯೂಸ್ ಪೇಪರ್ ಎಂಪ್ಲಾಯೀಸ್ ಫೆಡರೇಷನ್, ಆಲ್ ಇಂಡಿಯಾ ರಿಸರ್ವ್ ಬ್ಯಾಂಕ್ ಎಂಪ್ಲಾಯೀಸ್

[8ನೇ ಪುಟ ನೋಡಿ]

ಪ್ರಾಂತ ರೈತಸಂಘದ ಸಭೆ

ರಾಜ್ಯ ಸಮ್ಮೇಳನಕ್ಕೆ ತಯಾರಿ

ಕರ್ನಾಟಕ ರಾಜ್ಯದಲ್ಲಿ ಹಳ್ಳಿಯ ಬಡವರ, ಅಂದರೆ ಮುಖ್ಯವಾಗಿ ಬಡ ರೈತರು, ಕೃಷಿಕೂಲಿಗಾರರು, ಭೂಹೀನ ಜನತೆಯ ಬಲಿಷ್ಠ ಸಂಘಟನೆ, ರಾಜ್ಯಾದ್ಯಂತ ಹೋರಾಟಗಳು ಬೆಳೆದು ಬಂದಿಲ್ಲ. ಈ ಹಿನ್ನೆಲೆಯಲ್ಲಿ ಇಂದಿರಾ ಕಾಂಗ್ರೆಸ್ಸಿನ ತೋರ್ಬಿಕೆಯ ಕಾರ್ಯಕ್ರಮ ಮತ್ತು ಪ್ರಚಾರಗಳಿಂದ ಆಳುವ ಪಕ್ಷದ ಮೇಲೆ ಬಡಜನರಿಗೆ ಭ್ರಮೆ ಬೆಳೆದುದು ಸಹಜ. ಆದರೆ ಬಡಜನತೆಯ, ಕೃಷಿ ಕೂಲಿಗಾರರ, ರೈತರ ಸಂಘಟನೆ ಮತ್ತು ಹೋರಾಟಗಳು ಬೆಳೆದಂತೆಲ್ಲಾ ಸರಕಾರದ ವರ್ಗನೀತಿ ಏನೆಂಬುದು ಸ್ಪಷ್ಟವಾಗುವುದು. ಕೆಲವೆಡೆ ಈಗಾಗಲೇ ಸ್ಪಷ್ಟವಾಗಿದೆ. ಬಡಜನರಿಗಾಗಿ ಕೆಲವು ಕಾನೂನುಗಳು ಇರುವಾಗ, ಇವುಗಳ ಪ್ರಯೋಜನವನ್ನು ಪಡೆಯಲು ಬಡಜನತೆಯು ಸಂಘಟಿತ ಪ್ರಜಾಪ್ರಭುತ್ವ ಚಳುವಳಿಯನ್ನು ನಡೆಸಿರುವಾಗ ಸರಕಾರ ದಮನ ನೀತಿಯನ್ನು ಅನುಸರಿಸುತ್ತಲಿದೆ. ನಿಧಾನವಾಗಿ ಹಳ್ಳಿಯ ಬಡವರಲ್ಲೂ ರಾಜ್ಯದ ಕಾಂಗ್ರೆಸ್ ಸರಕಾರದ ಬಗ್ಗೆ ಭ್ರಮೆ ನಿರಸನವಾಗುತ್ತಲಿದೆ. ಈ ಸಂದರ್ಭ ರಾಷ್ಟ್ರಮಟ್ಟದಲ್ಲಿ ಚರಣಸಿಂಗರು ಶ್ರೀಮಂತ ರೈತರ ಲಾಭಕ್ಕಾಗಿ ರೈತಸಂಘ ಕಟ್ಟದಂತೆಯೇ ರಾಜ್ಯದಲ್ಲೂ, ಸ್ಥಳೀಯವಾಗಿಯೂ ಕೆಲವು ಪ್ರಯತ್ನ, ಪ್ರಚಾರ ನಡೆಯುತ್ತಿದೆ.

ರಾಜ್ಯದಲ್ಲಿ ಹಳ್ಳಿಯ ಬಡವರ ಬಲಿಷ್ಠ ಸಂಘಟನೆ, ರಾಜ್ಯಾದ್ಯಂತ ಸತತ ಚಳುವಳಿ, ಬೇಡಿಕೆಗಳನ್ನು ಪಡೆಯಲು ಸಂಯುಕ್ತ ಕಾರ್ಯಕ್ರಮ, ಸಾಮಾಜಿಕವಾಗಿ ಕೆಳತಳ್ಳಲ್ಪಟ್ಟವರ ಸಂರಕ್ಷಣೆಗಾಗಿ ಚಳುವಳಿ ಮೊದಲಾದುವುಗಳನ್ನು ನಿರ್ದಿಷ್ಟ ಕಾರ್ಯಕ್ರಮಗಳ ಆಧಾರದಲ್ಲಿ ಬೆಳೆಸಬೇಕಾಗಿದೆ. ರಾಜ್ಯದಾದ್ಯಂತ ರೈತರ, ಹಳ್ಳಿಯ ಬಡವರ ಸಮಸ್ಯೆಯ ಸ್ಪಷ್ಟ ರೂಪ ಮತ್ತು ಹೋರಾಟದ ಕಾರ್ಯಕ್ರಮ ರೂಪಿಸಬೇಕು. ಹೊಸ ರೀತಿಯಲ್ಲಿ, ಹೊಸ ಹುರುಪಿನಿಂದ ಮುನ್ನಡೆಯಬೇಕು. ಇವೆಲ್ಲವನ್ನೂ ಚರ್ಚಿಸಿ, ರಾಜ್ಯದಲ್ಲಿ ಹಳ್ಳಿಯ ಬಡವರ ಸಂಘಟನೆಯನ್ನು ಬೆಳೆಸಲು ಅನುಕೂಲವಾಗುವಂತಹ ಹೋರಾಟಗಾರ ನಾಯಕತ್ವ ಮತ್ತು ಕಾರ್ಯಕ್ರಮಗಳನ್ನು ರೂಪಿಸಲು ಮೇ ತಿಂಗಳ 12, 13 ಮತ್ತು 14 ರಂದು ದ. ಕ. ಜಿಲ್ಲೆಯ ಮಂಗಳೂರಲ್ಲಿ ರಾಜ್ಯದ ರೈತ ಸಮ್ಮೇಳನವನ್ನು ನಡೆಸಲು 17-4-79 ರಂದು ಬೆಂಗಳೂರಲ್ಲಿ ಸೇರಿದ ಪ್ರಾಂತ ರೈತಸಂಘ ಸಮಿತಿಯು ತೀರ್ಮಾನಿಸಿತು. ರಾಜ್ಯದಾದ್ಯಂತ ಪ್ರಚಾರ, ಪ್ರಕ್ಷೋಭೆ ನಡೆಸುವುದು; ನಿಜವಾದ ರೈತಸಂಘವೆಂಬುದನ್ನು ಜನತೆಗೆ ಸ್ಪಷ್ಟಪಡಿಸುವುದು, ಸಮ್ಮೇಳನವನ್ನು ಯಶಸ್ವಿಗೊಳಿಸುವುದರ ಬಗ್ಗೆ ಚರ್ಚೆಮಾಡಿ ತೀರ್ಮಾನಗಳನ್ನು ಕೈಗೊಳ್ಳಲಾಯಿತು. ಸಮ್ಮೇಳನದ ಕೊನೆಯ ದಿನ, ಅಂದರೆ ಮೇ 14 ರಂದು ಮಂಗಳೂರಿನಲ್ಲಿ ನೂರಾರು ಕೆಂಪು ಸಮವಸ್ತ್ರದ ಸ್ವಯಂಸೇವಕರಿಂದ ಸೇರಿದ ಬೃಹತ್ ಮೆರವಣಿಗೆ, ಬಹಿರಂಗ ಸಭೆ ನಡೆಸಲೂ ತೀರ್ಮಾನಿಸಲಾಯ್ತು. ಸಹೋದರ ಸಂಘಗಳು, ವ್ಯಕ್ತಿಗಳು ಸಂಪೂರ್ಣ ಸಹಕಾರ ಕೊಡಬೇಕೆಂದು ಸಮಿತಿಯು ಕರೆಯಿತ್ತಿದೆ.

ಕಾಂ. ಅಬ್ರಹಾಂ ಕರ್ಕಡರ ಅಧ್ಯಕ್ಷತೆಯಲ್ಲಿ ಸೇರಿದ್ದ ಸಭೆಗೆ ರೈತ ಮುಖಂಡರುಗಳಾದ ಕಾಂ. ಕೆ. ಎಮ್. ಶ್ರೀನಿವಾಸ್, ಕಾಂ. ಡಾ॥ ಹರಿನಾರಾಯಣ, ಕಾಂ. ಎನ್.ಜಿ. ಮ್ಹಾಳೇಸ್ಕರ್, ಕಾಂ. ಜನಾರ್ಧನ ನಾಯಕ್, ಕಾಂ. ಲಕ್ಷ್ಮಣ ರೆಡ್ಡಿ, ಕಾಂ. ಲಕ್ಷ್ಮಯ್ಯ, ಕಾಂ. ವೆಂಕಟೇಶ್, ಕಾಂ. ಮುಗವಾಳಪ್ಪ, ಕಾಂ. ಜಗನ್ನಾಥ, ಕಾಂ. ಎಚ್.ಸಿ. ಚಿನ್ನಪ್ಪ, ಕಾಂ. ಆರ್. ಎಸ್. ಚೆನ್ನಬಸವಣ್ಣ, ಕಾಂ. ದಸ್ತಗೀರ್, ಕಾಂ. ಲಕ್ಕಣ್ಣ, ಕಾಂ. ಸೂರ್ಯನಾರಾಯಣಭಟ್, ಕಾಂ. ಕೆ. ಆರ್. ನಾಯಕ್, ಕಾಂ. ಪಿ. ರಾಮಚಂದ್ರರಾವ್ ಮೊದಲಾದವರು ಭಾಗವಹಿಸಿದ್ದರು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್ ರವರೂ ಉಪಸ್ಥಿತರಿದ್ದರು.

ಕೊಡಗು ಜಿಲ್ಲೆಯ ತಿತಿಮತಿಯಲ್ಲಿ ರೈತರ ಮೇಲೆ ಸರಕಾರವು ನಡೆಸಿದ ಅಮಾನುಷ ದಾಳಿಯನ್ನು ಖಂಡಿಸಿ, ಈ ರೈತರಿಗೆ ಇನ್ನಾದರೂ ನ್ಯಾಯಕೊಡುವುದರಲ್ಲಿ ಸರಕಾರವು ವಿಫಲವಾದಲ್ಲಿ ರಾಜ್ಯಾದ್ಯಂತ ಚಳುವಳಿ ನಡೆಸುವ ತೀರ್ಮಾನ ಮಾಡಲಾಯಿತು. ಮೇ ಮಧ್ಯದಲ್ಲಿ ಸರಕಾರವು ತಿತಿಮತಿ ರೈತರಿಗೆ ನ್ಯಾಯ ಕೊಡದಿದ್ದಲ್ಲಿ ತಿತಿಮತಿಯಿಂದ ಬೆಂಗಳೂರಿಗೆ ರೈತರ ಕಾಲ್ನಡಿಗೆ ಜಾಥಾ; ಬೆಂಗಳೂರಿಗೆ ಜಾಥಾ ಬರುವಂದು ಬೆಂಗಳೂರಲ್ಲಿ ಬೃಹತ್ ಮೆರವಣಿಗೆ, ಸಭೆ, ಪ್ರತಿಭಟನೆ; ಜಾಥಾ ಬೆಂಗಳೂರಿಗೆ ಬರುವಂದು ರಾಜ್ಯಾದ್ಯಂತ ಅರಣ್ಯ ಅಧಿಕಾರಿಗಳ ಕಛೇರಿ ಎದುರು ಪ್ರತಿಭಟನಾ ಸಭೆ, ಪಿಕೆಟಿಂಗ್ ಮೊದಲಾದ ಕಾರ್ಯಕ್ರಮಗಳನ್ನು ಹಾಕಲು ತೀರ್ಮಾನಿಸಲಾಯ್ತು. ಸರಕಾರದ ರೈತ ವಿರೋಧಿ ನೀತಿಯ ವಿರುದ್ಧ ಸಂಯುಕ್ತ ಚಳುವಳಿಗೆ ಕರೆ ಕೊಡಲಾಯಿತು.

ಕೋಲಾರ ಜಿಲ್ಲೆಯ ಆಲೂಗೆಡ್ಡೆ ಬೆಳೆಗಾರರಿಗೆ ಬೆಲೆನಾಶವಾಗಿ ಆದ ಅಪಾರ ಕಷ್ಟ ನಷ್ಟವನ್ನು ಸರಕಾರ ತುಂಬಬೇಕೆಂದೂ, ಈಬೆಳೆಗಾರರ ಸಾಲ ವಸೂಲಿ ಕೆಲಸವನ್ನು ಮುಂದೂಡಬೇಕೆಂದೂ ಸರಕಾರವನ್ನು ಒತ್ತಾಯಿಸಲಾಯಿತು. ರೈತರಿಂದ, ಅವರ ಸಾಲದ ಮೇಲೆ ದಂಡದ ರೂಪದಲ್ಲೂ ಬಡ್ಡಿ ಮತ್ತು ದುಬಾರಿ ಖರ್ಚು ವಸೂಲಿ ಮಾಡುವುದನ್ನು ಕೂಡಲೇ ನಿಲ್ಲಿಸಬೇಕೆಂದೂ ಸರಕಾರವನ್ನು ಒತ್ತಾಯಿಸಲಾಯ್ತು. ಶಿವಮೊಗ್ಗ ಜಿಲ್ಲೆಯ ವಹಾಹಿ ಮತ್ತು ಚಕ್ರ ನೀರಾವರಿ ಯೋಜನೆಗಳಿಂದ ಮನೆಮಾರು, ಭೂಮಿ ಕಳೆದುಕೊಂಡ ಸಹಸ್ರಾರು ಬಡ ರೈತರಿಗೆ ಕೂಡಲೇ ಯೋಗ್ಯ ಬದಲಿ ವ್ಯವಸ್ಥೆಯನ್ನು ಮಾಡಬೇಕೆಂದು ಸರಕಾರವನ್ನು ಒತ್ತಾಯಿಸುವ ನಿರ್ಣಯ ಮಾಡಲಾಯ್ತು. ●

ರಾಜ್ಯ ರೈತ ಸಮ್ಮೇಳನ

ಮೇ 12, 13 ಮತ್ತು 14 ರಂದು ಕರ್ನಾಟಕ ರಾಜ್ಯ ರೈತ ಸಮ್ಮೇಳನವು ಮಂಗಳೂರಲ್ಲಿ ಜರಗಲಿದೆ. ಸಮ್ಮೇಳನಕ್ಕೆ ಪ್ರತಿ 100 ಸದಸ್ಯರಿಗೆ ಒಬ್ಬ ಪ್ರತಿನಿಧಿಯಂತೆ ಕಳುಹಿಸಬೇಕು. ಜಿಲ್ಲಾ ಸಮಿತಿಗಳೂ, ಸ್ಥಳೀಯ ಸಮಿತಿಗಳೂ, ಸಮಿತಿಗಳಿಲ್ಲದಲ್ಲಿ ಮುಖ್ಯ ಕಾರ್ಯಕರ್ತರೂ ಸೇರಿ ಪ್ರತಿನಿಧಿಗಳನ್ನು ಆಯ್ಕೆ ಮಾಡಬೇಕು. ರಾಜ್ಯದಾದ್ಯಂತ ಪ್ರಚಾರ ನಡೆಸಬೇಕು. ಸದಸ್ಯತ್ವದ ವಿವರ ಮತ್ತು ಸದಸ್ಯತ್ವ ಒಂದರ 10 ಪೈಸೆಯಂತೆ ಏಪ್ರಿಲ್ 25ರೊಳಗೆ ಕಾಂ. ಎಂ.ಕೆ. ಭಟ್ ಇವರಿಗೆ ಕಳುಹಿಸಿಕೊಡಬೇಕು.

ಪಿ. ರಾಮಚಂದ್ರ ರಾವ್
ಪ್ರಾಂತ ಸಮಿತಿ ಸಂಚಾಲಕ.

ಪುತ್ತೂರು ಸಮಿತಿಯ ಮನವಿ

ದ. ಕ. ಜಿಲ್ಲೆ ಪುತ್ತೂರು ನಗರ ಸಭೆಯ ಚುನಾವಣೆ ನಡೆಯದೆ, ಆಡಳಿತಕ್ಕಾಗಿ ಕಾಂಗ್ರೆಸ್ (ಐ) ಪುಢಾರಿಗಳೇ ತುಂಬಿರುವ ಒಂದು ಸಲಹಾ ಸಮಿತಿಯನ್ನು ನೇಮಿಸಲಾಗಿದೆಯೆಂಬ ಸುದ್ದಿ ತಿಳಿದುಬಂದಿದೆ. ಪುತ್ತೂರಿಗೆ ಎಷ್ಟು ಆಶ್ವಾಸನೆಗಳ ನಂತರವೂ ನಲ್ಲಿ ನೀರು ಬರದೇ ಹೋಗಿದೆ. ಈಗ ನೀರಿನ ವ್ಯವಸ್ಥೆಗೆ 56 ಲಕ್ಷ ರೂ. ಗಳನ್ನು ಸರ್ಕಾರ ಮಂಜೂರು ಮಾಡಿದ್ದು ಈ ನೆವದಿಂದ ಚುನಾವಣೆ ನಡೆದಾಗ ಮತ್ತೆ ಕಾಂಗ್ರೆಸ್ಸನ್ನೇ ತರುವ ಸನ್ನಾಹ ನಡೆದಿದೆ. ಈ ಪ್ರಜಾಪ್ರಭುತ್ವ ವಿರೋಧಿಕ್ರಮವನ್ನು ಪುತ್ತೂರಿನ ಜನತೆ ಖಂಡಿಸಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್‌ಪಕ್ಷದ ಜಿಲ್ಲಾ ಸಮಿತಿ ಕರೆಕೊಟ್ಟಿದೆ. ಈಗ ಚುನಾವಣೆ ನಡೆಸಿ, ಅದರಲ್ಲಿ ಚುನಾಯಿತರಾದ ಪ್ರತಿನಿಧಿಗಳ ಮೂಲಕವೇ ನೀರಿನ ವ್ಯವಸ್ಥೆ ಮತ್ತಿತರ ಕೆಲಸಗಳನ್ನು ನಡೆಸಬೇಕೆಂದು ಜಿಲ್ಲಾ ಸಮಿತಿ ಸರ್ಕಾರವನ್ನು ಒತ್ತಾಯಿಸುತ್ತದೆ. ○

ಕೊಡಗು ಜಿಲ್ಲೆಯ ಕಡಮ್ಮಕಲ್ ಮತ್ತು ಕೂಜಿಮಲೆ ರಬ್ಬರ್ ತೋಟದ ಕಾರ್ಮಿಕರು ಕಳೆದ 2 ವರ್ಷಗಳಿಂದ ಸಿ.ಐ.ಟಿ.ಯು. ನೇತೃತ್ವದ ತೋಟಕೆಲಸಗಾರರ ಸಂಘ ಸುಳ್ಯದ ಸದಸ್ಯರಾಗಿ ಹಲವಾರು ಹೋರಾಟಗಳನ್ನು ನಡೆಸಿರುತ್ತಾರೆ. ಈ ತೋಟಗಳಲ್ಲಿ 1959ರ ವರೆಗೆ ಅಂದು ಒಂದಾಗಿದ್ದ ಎ. ಐ. ಟಿ. ಯು. ಸಿ. ನೇತೃತ್ವದ ಸಂಘಟನೆ ಇತ್ತು. ಆದರೆ ಮಾಲೀಕರು ಈ ಸಂಘಟನೆಯನ್ನು ಪುಡಿಗೈದರು. 18 ವರ್ಷಗಳ ಮೇಲೆ ಪುನಃ ಈ ಕಾರ್ಮಿಕರು ಸಿ. ಐ. ಟಿ. ಯು. ಬಾವುಟದಡಿಯಲ್ಲಿ ಸಂಘಟಿತರಾದರು. ಈ ಸಂಘಟನೆಯನ್ನು ಮುರಿಯಲು ಮಾಲಕರು ಹಲವು ದಾಳಿಗಳನ್ನು ಮಾಡಿದರು.

ಕಳೆದ ವರ್ಷ ಕೊಡಗಿನಿಂದ 2 ರಿಸರ್ವ್ ಪೋಲೀಸ್ ವ್ಯಾನ್‌ಗಳನ್ನು ತಂದು 36 ದಿವಸ ತೋಟದಲ್ಲಿಟ್ಟು ಕೋರ್ಟಿನಲ್ಲಿ ಜಾಮೀನಿನಲ್ಲಿ ಬಿಡುಗಡೆಯಾಗಿ ಇವರು ಹೊರಗೆ ಬರುವಾಗ ಸಂಜೆ ಐದುವರೆ ಗಂಟೆಗೆ ಪುನಃ ಸಬ್ ಇನ್ಸ್‌ಪೆಕ್ಟರು ಬಂಧಿಸಿ ತಹಸೀಲ್ದಾರರ ಕೋರ್ಟಿನಲ್ಲಿ 107 ಸೆಕ್ಷನ್ ಪ್ರಕಾರ ಮೊಕದ್ದಮೆ ಹೂಡಿ ಒಂದು ದಿವಸ ರಿಮ್ಯಾಂಡಿಗೆ ಕಳುಹಿಸಿರುತ್ತಾರೆ.

ಇನ್ನೂ ಎಸ್ಟೇಟಿನಲ್ಲಿ ಪೋಲೀಸರಿದ್ದು ಮಾಲೀಕರು ಮತ್ತು ಅವರ ಏಜೆಂಟರು ಹೋಗುವಾಗ ಅವರ ಜೀಪಿನಲ್ಲಿ ಪೋಲೀಸರು ಹೋಗುತ್ತಿದ್ದು, ಹತ್ತಿರದ ದ. ಕ. ಜಿಲ್ಲೆಯ ಸುಳ್ಯ ಮತ್ತು ಕೊಲ್ಲಮೊಗರುಗಳಿಗೂ ಮಾಲೀಕರೊಡನೆ ಈ ಪೋಲೀಸರು ಬರುತ್ತಾರೆ.

ತೋಟದಲ್ಲಿ ಕೆಲಸಮಾಡುವಲ್ಲಿಗೆ ಪೋಲೀಸರು ಮಾಲೀಕರೊಡನೆ ಬಂದು ಕೆಲಸಗಾರರನ್ನು ಬಲಾತ್ಕರಿಸುತ್ತಿದ್ದಾರೆ.

ಈ ತೋಟದ ಕಾರ್ಮಿಕರ ಮುಷ್ಕರ...

ಕಡಮ್ಮಕಲ್ ರಬ್ಬರ್ ತೋಟದಲ್ಲಿ ಕಾರ್ಮಿಕರ ಧೀರ ಹೋರಾಟ

ಸಂಘಟನೆಯನ್ನು ಪತ್ರಿಕ್ಕಲು ನೋಡಿದರು. ಆದರೆ ಈ ದಬ್ಬಾಳಿಕೆಯನ್ನು ಎದುರಿಸಿ 40 ದಿನ ಕಾರ್ಮಿಕರು ಹೋರಾಟ ನಡೆಸಿದರು. ಕಳೆದ ವರ್ಷ ಈ ಮಾಲೀಕರು ರೂ. 20,000 ಪೋಲೀಸ್ ಪಡೆಗಳಿಗಾಗಿ ಖರ್ಚು ಮಾಡಿದರು. ಈ ಕಾರ್ಮಿಕರ ಮೇಲೆ ಸುಳ್ಳು ಕ್ರಿಮಿನಲ್ ಕೇಸುಗಳನ್ನು ಹಾಕಿದ್ದು, ಇದು ಕೋರ್ಟಿನಲ್ಲಿ ತನಿಖೆಗೆ ಬಾಕಿ ಇದೆ. ಇದಲ್ಲದೆ, 32 ದಿನ ಎಸ್ಟೇಟ್‌ಲಾಕ್ ಔಟು ಮಾಡಿದರು.

ಇದೇ ಎಸ್ಟೇಟಿನಲ್ಲಿ ತಾ. 20-4-79 ರಿಂದ ಕೆಲಸದ ಪದ್ಧತಿಯನ್ನು ಬದಲಾಯಿಸಿ ಹೆಂಗಸರು ಒಬ್ಬೊಬ್ಬರಾಗಿ ತೋಟದ ಮೂಲೆಗಳಲ್ಲಿ ಕೆಲಸ ಮಾಡಬೇಕೆಂದು "ಮ್ಯಾನೇಜ್‌ಮೆಂಟ್ ಒತ್ತಾಯಮಾಡಿತು. ಕಾರ್ಮಿಕರು ಇದನ್ನು ಪ್ರತಿಭಟಿಸಿದರು. ಒಡನೆಯೇ ಮಾಲೀಕರು ಮಡಿಕೇರಿಯಿಂದ ಒಂದು ವ್ಯಾನ್ ರಿಸರ್ವ್ ಪೋಲೀಸರನ್ನು ತಂದು ತೋಟದಲ್ಲಿ ಇಟ್ಟಿರುತ್ತಾರೆ. ದಿನಒಂದಕ್ಕೆ ಒಬ್ಬ ಪೋಲೀಸರಿಗೆ ಈ ಮಾಲೀಕರು ರೂ. 60ನ್ನು ಖರ್ಚು ಮಾಡುತ್ತಿದ್ದಾರೆ. ತಾ. 20-4-79 ರಿಂದ ಈ ಕಾರ್ಮಿಕರಿಗೆ ರೇಷನ್ ಮತ್ತು ಸಂಬಳವನ್ನು ನಿರಾಕರಿಸಲಾಗಿದೆ. ಮಡಿಕೇರಿಯ ಲೇಬರ್ ಆಫೀಸರರು ಸಂಧಾನ ಮಾತುಕತೆ ನಡೆಸಿದರೂ ಈ ಮಾಲೀಕರು ತಮ್ಮ ಹಠ ಮಾರಿತನವನ್ನು ಬಿಡದೆ ಪಟ್ಟುಹಿಡಿದಿದ್ದಾರೆ.

7 ಜನ ಕಾರ್ಮಿಕರನ್ನು ಮಾಲೀಕರ ಜೀಪಿನಲ್ಲಿ ಮಡಿಕೇರಿಗೆ ಸಾಗಿಸಿ ಕ್ರಿಮಿನಲ್ ಮೊಕದ್ದಮೆ ಹೂಡಿರುತ್ತಾರೆ. ಕಾರ್ಮಿಕರೂ ಸೇರಿ ಕಾಲನಿಗಳಿಗೆ ರಾತ್ರಿ ಹೊತ್ತು ಪೋಲೀಸರು ಬಂದು ಬಲಾತ್ಕರಿಸತೊಡಗಿದ್ದಾರೆ.

ಪೋಲೀಸರಿಗೆ ಎಸ್ಟೇಟ್ ಮಾಲೀಕರು ಸರಾಯಿ, ಕೋಳಿ, ಹಂದಿಗಳನ್ನು ಸರಬರಾಜು ಮಾಡಿ ದಬ್ಬಾಳಿಕೆ ನಡೆಸುತ್ತಿದ್ದಾರೆ.

ಮಡಿಕೇರಿ ಪೋಲೀಸ್ ಸ್ಟೇಷನಿಗೆ, ಒಬ್ಬ ಮಹಿಳಾ ಕಾರ್ಮಿಕಳ ಮೇಲೆ ರೈಟರ್ ನಡೆಸಿದ ಅತ್ಯಾಚಾರದ ಬಗ್ಗೆ 2 ತಿಂಗಳ ಹಿಂದೆ ದೂರು ಕೊಟ್ಟಿದ್ದರೂ ಪೋಲೀಸರು ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಕೊಡಗಿನಾದ್ಯಂತ ತೋಟಕಾರ್ಮಿಕರ ಮೇಲೆ ನಡೆಯುವ ದಾಳಿಯ ಅಂಗವಾಗಿ ಇಲ್ಲಿಯೂ ದಬ್ಬಾಳಿಕೆ ನಡೆಯುತ್ತಿದೆ.

ತೋಟಕೆಲಸಗಾರರ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಸೂರ್ಯನಾರಾಯಣ ಭಟ್‌ರವರು ಈ ತೋಟಗಳಿಗೆ ಹೋಗಿ ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡಿ ಬೃಹತ್ ಹೋರಾಟ ನಡೆಸಲು ಕಾರ್ಮಿಕರಿಗೆ ಕರೆಕೊಟ್ಟಿರುತ್ತಾರೆ. ಸರಕಾರಿ ರಬ್ಬರ್ ತೋಟದ ಕಾರ್ಮಿಕರು ಈ ಹೋರಾಟಕ್ಕೆ ಬೆಂಬಲಕೊಟ್ಟಿರುತ್ತಾರೆ.

ಸರಕಾರವು ಕೂಡಲೇ ಮಧ್ಯಪ್ರವೇಶಿಸಿ ಪೋಲೀಸರನ್ನು ತೋಟದಿಂದ ಹಿಂತೆಗೆಯಬೇಕೆಂದು ತೋಟ ಕೆಲಸಗಾರರ ಸಂಘವು ಒತ್ತಾಯಿಸುತ್ತದೆ. ●

ಆರ್ಥಿಕ ಸಮೀಕ್ಷೆ:

ಕೈಗಾರಿಕೆಗಳ ರಾಷ್ಟ್ರೀಕರಣದ ಕುರಿತು

ಆರ್. ಚಂದ್ರ

ಜನವರಿ, 1979 ರಲ್ಲಿ ನಡೆದ ಜನತಾಪಕ್ಷದ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯಲ್ಲಿ ಕೇಂದ್ರ ಕೈಗಾರಿಕಾ ಮಂತ್ರಿ ಜಾರ್ಜ್‌ಫರ್ನಾಂಡಿಸ್ ಮತ್ತು ಉಕ್ಕು ಹಾಗೂ ಗನಿ ಉದ್ಯಮಗಳ ಮಂತ್ರಿ ಬಿಜು ಪಾಟ್ನಾಯಕ್ ಉಕ್ಕು, ಅಲ್ಯುಮಿನಿಯಂ, ಆಟೋ ಮೊಬೈಲ್ ಮುಂತಾದ ಕೆಲವು ಪ್ರಧಾನ ಕೈಗಾರಿಕೆಗಳನ್ನು ರಾಷ್ಟ್ರೀಕರಿಸಲು ಸಲಹೆ ಮಾಡಿದರು. ಈ ಸಲಹೆಯು ಜನತಾಪಕ್ಷದೊಳಗೂ ದೇಶಾದ್ಯಂತ ಇತರ ವಲಯಗಳಲ್ಲೂ ಸಾಕಷ್ಟು ಗುಲ್ಲೆಬ್ಬಿಸಿತು. ಬಂಡವಾಳಶಾಹಿ ನಿಯಂತ್ರಿತ ಪತ್ರಿಕೆಗಳಲ್ಲಿ ಅವರ ಬಾಲಬಡುಕರು ಪುನಃ ಕೈಗಾರಿಕೆಗಳ ರಾಷ್ಟ್ರೀಕರಣದ ಪರ ಮತ್ತು ವಿರೋಧವಾಗಿ ವಾದವಿವಾದಗಳನ್ನೆಬ್ಬಿಸಿದರು. ಹೆಚ್. ಎಂ. ಪಾಟೀಲ್, ಎಲ್. ಕೆ. ಅದ್ವಾನಿ, ಪೀಲೂಮೋದಿ, ಸುಬ್ರಹ್ಮಣ್ಯಸ್ವಾಮಿ ಮುಂತಾದ ಜನತಾ ವರಿಷ್ಠ ನಾಯಕರು ರಾಷ್ಟ್ರೀಕರಣದ ಸಲಹೆಯನ್ನು ತೀವ್ರವಾಗಿ ವಿರೋಧಿಸಿದರೆ, ಮಧು ಲಿಮಯೆ, ಭಾನುಪ್ರತಾಪ್‌ಸಿಂಗ್ ಮುಂತಾದವರು ಈ ಸಲಹೆಗೆ ಬೆಂಬಲ ನೀಡಿದರು. ಪ್ರಧಾನಿ ಮುರಾರ್ಜಿ ದೇಸಾಯಿ ಸಂಸತ್ತಿನ ಒಳಗೂ ಹೊರಗೂ ರಾಷ್ಟ್ರೀಕರಣದ ಸಲಹೆಯನ್ನು ತಳ್ಳಿ ಹಾಕಿರುವುದೇ ಅಲ್ಲದೆ, ಆ ಕುರಿತು ಚರ್ಚೆಗೇ ಆಸ್ಪದ ಕೊಡಲಿಲ್ಲ ಮತ್ತು ಅಂತಹ ಸಲಹೆಗಳು ಸಂಬಂಧಪಟ್ಟ ಮಂತ್ರಿಗಳ ವೈಯಕ್ತಿಕ ಅಭಿಪ್ರಾಯವೆಂದೂ, ಸರಕಾರಕ್ಕೆ ಸಧ್ಯ ಯಾವುದೇ ಕೈಗಾರಿಕೆಯನ್ನು ರಾಷ್ಟ್ರೀಕರಿಸುವ ಉದ್ದೇಶವಿಲ್ಲವೆಂದೂ ಸ್ಪಷ್ಟಪಡಿಸಿದರು.

ಆದರೆ, ಜಾರ್ಜ್‌ಫರ್ನಾಂಡಿಸ್ ತಾನು ಕೆಲವು ಮುಖ್ಯ ಕೈಗಾರಿಕೆಗಳ ರಾಷ್ಟ್ರೀಕರಣದ ಸಲಹೆ ಮಾಡಿದ್ದು ಜನತಾಪಕ್ಷದ ಧ್ಯೇಯ ಧೋರಣೆಗಳಿಗೂ ಕಾರ್ಯಕ್ರಮಗಳಿಗೂ ಅನುಗುಣವಾಗಿಯೇ ಇದೆ ಎಂದು ಸಾಧಿಸುತ್ತಿದ್ದಾರೆ. ಜನತಾಪಕ್ಷವು ಆರ್ಥಿಕ ಹಾಗೂ ಉತ್ಪಾದನಾ ಶಕ್ತಿಗಳು ದೇಶದಲ್ಲಿ ಕೆಲವೇ ಗುತ್ತೇದಾರಿ ಕುಟುಂಬಗಳ ಕೈಗಳಲ್ಲಿ ಕೇಂದ್ರೀಕೃತವಾಗುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿ, ಆರ್ಥಿಕ ಪ್ರಗತಿಯು ಆರ್ಥಿಕ ವಿಕೇಂದ್ರೀಕರಣದಿಂದಲೇ ಸಾಧ್ಯ ಎಂದು ನಂಬಿ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಅಭಿವೃದ್ಧಿಯನ್ನು ಹಾರೈಸಿ ಅದರಲ್ಲಿ ಆಸಕ್ತರಾದ ಉದ್ದಿಮೆದಾರರಿಗೆ ಪ್ರೋತ್ಸಾಹಿಸಿ; ಗುತ್ತೇದಾರಿ ಶಕ್ತಿಗಳು ಮುಂದುವರಿಯದಂತೆ ಮತ್ತು ಹೊಸದಾಗಿ ತಲೆ ಎತ್ತದಂತೆ ತಡೆಯುವುದಾಗಿ ಉದ್ದೇಶ ಹೊಂದಿರುವುದೆಂದು ಫರ್ನಾಂಡಿಸ್ ಆಗಾಗ ಪುನಃರುಚ್ಚರಿಸುತ್ತಿದ್ದಾರೆ. ಕೈಗಾರಿಕೆಗಳನ್ನು, ಗುತ್ತೇದಾರಿ ಕುಟುಂಬಗಳ ಅನುವಂಶಿಕ ಆಡಳಿತೆಯಿಂದ ಮುಕ್ತಗೊಳಿಸುತ್ತೇನೆಂದೂ ಅವರು ಆಗಾಗ ಹೇಳುತ್ತಿರುತ್ತಾರೆ. ಕೇಂದ್ರ ಕೈಗಾರಿಕಾ ಖಾತೆಯ ಮುಂದಿನ ವರುಷದ ಬೇಡಿಕೆಯನ್ನು ಇತ್ತೀಚೆಗೆ ಸಂಸತ್ತಿನಲ್ಲಿ ಅಂಗೀಕರಿಸುವಾಗ, ಅದಷ್ಟು ಕೈಗಾರಿಕೆಗಳನ್ನು ರಾಷ್ಟ್ರೀಕರಿಸುವುದಾಗಿ ಫರ್ನಾಂಡಿಸ್ ಪುನಃ ಘೋಷಿಸಿದ್ದಾರೆ.

ಈ ಮಧ್ಯೆ, ಕೈಗಾರಿಕೆಗಳ ರಾಷ್ಟ್ರೀಕರಣವು ಪ್ರಜಾಪ್ರಭುತ್ವದ ಮತ್ತು ಮಿಶ್ರ ಆರ್ಥಿಕ ನೀತಿಗಳಿಗೆ ವಿರುದ್ಧ ಎಂದೂ, ಉದ್ದಿಮೆದಾರರ ಕ್ರಿಯಾಶಕ್ತಿ ಮತ್ತು ಆಸಕ್ತಿಯನ್ನು ಕುಂದಿಸುವುದೆಂದೂ, ಖಾಸಗೀರಂಗವು ಸಾರ್ವಜನಿಕ ರಂಗಕ್ಕಿಂತ ಹೆಚ್ಚು ದಕ್ಷತೆ ಉಳ್ಳದ್ದೆಂದೂ, ಜೆ. ಆರ್. ಡಿ. ಟಾಟಾ ಜನತಾಪಕ್ಷದ ಕಾರ್ಯಕಾರಿ ಸಮಿತಿಗೆ ಒಂದು ಮನವಿಯನ್ನು ಸಲ್ಲಿಸಿದ್ದಾರೆ. ಇಬ್ಬರು ಮಂತ್ರಿಗಳ ಸಲಹೆಯನ್ನು ಪರಿಶೀಲಿಸಲು ಅಧ್ಯಕ್ಷ ಚಂದ್ರಶೇಖರ್ ಈಗಾಗಲೇ 11 ಮಂದಿ ಸದಸ್ಯರಿರುವ ಒಂದು ಸಮಿತಿಯನ್ನು ನೇಮಿಸಿ ಕಾರ್ಯಕಾರಿ ಸಮಿತಿಯಲ್ಲಿ ಉಂಟಾದ ಗೊಂದಲವನ್ನು ತತ್ಕಾಲ ಪರಿಹರಿಸಿದ್ದಾರೆ. ಕೈಗಾರಿಕೆಗಳ ರಾಷ್ಟ್ರೀಕರಣದ ವಿಷಯವಾಗಿ ಯಾಕೆ ಇನ್ನೊಮ್ಮೆ ವಾದ ವಿವಾದಗಳು ತಲೆ ಎತ್ತಿವೆ?

ಜನತಾ ಸರಕಾರ ಜನಪ್ರಿಯತೆಯನ್ನು ಕಳೆದುಕೊಳ್ಳುತ್ತಿದೆ:

ಜನತಾ ಸರಕಾರವು ಅಧಿಕಾರದಲ್ಲಿದ್ದು ಎರಡು ವರುಷಗಳಾಗುತ್ತಿದ್ದಂತೆಯೇ, ಚುನಾವಣೆಗಳ ಕಾಲದಲ್ಲಿ ಅದು ಜನರಿಗೆ ನೀಡಿದ ಆಶ್ವಾಸನೆಗಳನ್ನು ಈಡೇರಿಸಲಾಗದೆ ತನ್ನೊಳಗಿನ ತೀವ್ರ ಅಂತಃ ಕಲಹಗಳಲ್ಲಿ ಮುಳುಗಿದ್ದು ಜನಪ್ರಿಯತೆಯನ್ನು ಕಳೆದುಕೊಳ್ಳುತ್ತಿದೆ. ಆಡಳಿತದ ಸೂತ್ರವು ಅಧಿಕಾರಿಶಾಹಿಗಳ ಕಪಿಮುಷ್ಟಿಯಲ್ಲಿ ಬಿಗಿಯಾಗುತ್ತಿದೆ. ಅದು ಕಾಂಗ್ರೆಸ್ ಮೂವತ್ತು ವರುಷಗಳಿಂದ ಅನುಸರಿಸಿಕೊಂಡು ಬಂದಿದ್ದ ಬಂಡವಾಳಶಾಹಿ ಆರ್ಥಿಕ ಬೆಳವಣಿಗೆಯ ಮಾರ್ಗವನ್ನೇ ಮುಂದುವರಿಸುತ್ತಾ ಬಂದಿದೆ. ಗ್ರಾಮೀಣ ಪ್ರದೇಶಗಳಲ್ಲಿ ಹರಿಜನ ಗಿರಿಜನರು ಅಧಿಕ ಸಂಖ್ಯೆಯಲ್ಲಿರುವ, ಬಡರೈತರು ಮತ್ತು ಭೂಹೀನ ಕೃಷಿ ಕಾರ್ಮಿಕರು ಭೂಮಿಗಾಗಿ, ಕನಿಷ್ಟ ಕೂಲಿಗಾಗಿ, ಹೋರಾಡುತ್ತಿರುವುದನ್ನು ಭೂಮಾಲಕರ ಗುಂಡಾಗಳಿಂದಲೂ ಪೋಲೀಸು ಪಡೆಗಳಿಂದಲೂ ಹತ್ತಿಕ್ಕಲಾಗುತ್ತಿದೆ. ಅಲ್ಪಸಂಖ್ಯಾತರ ಮೇಲೆ ಜನತಾಪಕ್ಷದ ಬೆಂಬಲಿಗ ಸಂಸ್ಥೆಯಾದ ಆರ್.ಎಸ್.ಎಸ್. ಪಡೆಗಳು ಧಾಳಿನಡೆಸುತ್ತಿವೆ. ನಿರುದ್ಯೋಗ, ಬಡತನ, ಭೂಸುಧಾರಣೆ, ಆದಾಯ ಸಂಪತ್ತುಗಳ ಕೇಂದ್ರೀಕರಣ, ಬೆಲೆ ಏರಿಕೆ, ಕರಭಾರ ಮುಂತಾದ ಸಮಸ್ಯೆಗಳನ್ನು ಬಗೆಹರಿಸಲಾಗದೆ, ದುಡಿಯುವ ಜನರ ಪ್ರಜಾಸತ್ತಾತ್ಮಕ ಹೋರಾಟವನ್ನು ಹತ್ತಿಕ್ಕಲು 'ಮಿನಿ ಮೀಸಾ' ಕಾನೂನುಗಳನ್ನು ಕೆಲವು ಜನತಾ ರಾಜ್ಯ ಸರಕಾರಗಳು ಜಾರಿಯಲ್ಲಿಟ್ಟಿವೆ. ಸಂಘಟಿತ ಕಾರ್ಮಿಕರ ವೇತನ, ತುಟ್ಟಿಭತ್ತೆ, ಬೋನಸ್, ಇತ್ಯಾದಿಗಳನ್ನು ಕಡಿಮೆ ಮಾಡುವ ಭೂತಲಿಂಗಂ ವರದಿಯ ಸಲಹೆಗಳನ್ನು ಜಾರಿಗೊಳಿಸಲು ಸತತ ಪ್ರಯತ್ನಿಸುತ್ತಿದೆ. ಕಾರ್ಮಿಕ ಸಂಘಟನೆಗಳಿಗೆ ಮುಟ್ಟುಗೋಲು ಹಾಕಿ, ಅವುಗಳ ಹೋರಾಟದ ಶಕ್ತಿ ಕುಂದಿಸುವಂತೆ ಕೈಗಾರಿಕಾ ಸಂಬಂಧಗಳ ಮಸೂದೆಯನ್ನು ಈಗಾಗಲೇ ಸಂಸತ್ತಿನ ಮುಂದಿಟ್ಟಿದೆ.

ತುರ್ತುಪರಿಸ್ಥಿತಿಯಲ್ಲಿ ಜಾರಿಗೆ ತಂದಿರುವ ಸಂವಿಧಾನದ 42ನೇ ತಿದ್ದುಪಡಿಯ ಅನೇಕ ಕರಾಳ ಅಂಶಗಳನ್ನು ರದ್ದುಗೊಳಿಸಲು ಜನತಾ ಸರಕಾರವು ವಿಫಲವಾಗಿದೆ. ತುರ್ತುಪರಿಸ್ಥಿತಿಗೆ ಕಾರಣರಾದ ಮತ್ತು ಆ ಕಾಲದಲ್ಲಿ ಜನರ ಮೇಲೆ ಅತ್ಯಾಚಾರ ಅತಿರೇಕಗಳನ್ನು ನಡೆಸಿದ ಇಂದಿರಾಗಾಂಧಿ, ಸಂಜಯಗಾಂಧಿ ಮತ್ತವರ ಬಳಗದವರನ್ನು ಶಿಕ್ಷಿಸಲು ಜನತಾ ಸರಕಾರ ವಿಫಲಗೊಂಡಿದೆ. ಈ ಮಧ್ಯೆ, ಜನತಾ ಸರಕಾರವು ಬಹು ರಾಷ್ಟ್ರೀಯ ಸಂಸ್ಥೆಗಳು ಭಾರತದಲ್ಲಿ ತಮ್ಮ ವ್ಯವಹಾರ ಹೆಚ್ಚಿಸಲು ಉದಾರ ನೀತಿಯನ್ನು ಅನುಸರಿಸುತ್ತಿದೆ. ಗುತ್ತೇದಾರಿ ಕೈಗಾರಿಕಾ ಸಂಸ್ಥೆಗಳಿಗೆ ಅನುಕೂಲವಾಗುವಂತೆ ಆಮದು ಮತ್ತು ಲೈಸನ್ಸ್ ನೀತಿಗಳನ್ನು ಸಡಿಲಗೊಳಿಸುತ್ತಿದೆ. ಜನರ ಗ್ರಾಹಕ ಶಕ್ತಿ ಕ್ಷಯದಿಂದಾಗಿ ಆಂತರಿಕ ಮಾರುಕಟ್ಟೆಯು ಕುಂದುತ್ತಿರುವಾಗ, ದೊಡ್ಡ ಬಂಡವಾಳಗಾರರ ಉತ್ಪಾದನೆಗೆ ವಿಶೇಷ ಸಹಾಯ ನಿಧಿ ನೀಡಿ ವಿದೇಶಿ ಮಾರುಕಟ್ಟೆಯ ಸೌಲಭ್ಯವನ್ನು ಒದಗಿಸಿಕೊಡುತ್ತಿದೆ. ಬಂಡವಾಳಶಾಹಿ ಆರ್ಥಿಕ ಬೆಳವಣಿಗೆಯ ಭಾರವನ್ನೆಲ್ಲಾ ಜನಕೋಟಿಯ ಹೆಗಲಮೇಲೆ ಹೇರುತ್ತಿದೆ.

ಇಂತಹ ಜನವಿರೋಧಿ ನೀತಿಗಳಿಂದ ಜನಪ್ರಿಯತೆಯನ್ನು ಕಳೆದುಕೊಳ್ಳುತ್ತಿರುವ ಜನತಾ ಸರಕಾರದ ಪ್ರತಿಷ್ಟೆಯನ್ನು ಪುನಃ ಸ್ಥಾಪಿಸುವುದು ಹೇಗೆ ಎಂಬುದೇ ಜನತಾಪಕ್ಷದ ನಾಯಕರ ತಲೆತಿನ್ನುತ್ತಿರುವ ದೊಡ್ಡ ಸಮಸ್ಯೆ. ಈ ಸಂದಿಗ್ಧ ಸನ್ನಿವೇಶದಲ್ಲಿ ಈಗಾಗಲೇ ಹಲವಾರು ಕಾರಣಗಳಿಂದ ರಾಷ್ಟ್ರೀಕರಿಸಬೇಕಾಗಿರುವ ಟಾಟಾ ಐರನ್ ಅಂಡ್ ಸ್ಟೀಲ್ ಕಂಪೆನಿ (TISCO), ಹಿಂದುಸ್ಥಾನ ಮೋಟಾರ್ಸ್, ಹಿಂದುಸ್ಥಾನ ಅಲ್ಯುಮಿನಿಯಂ ಮುಂತಾದ ಕೆಲವು ಸಂಸ್ಥೆಗಳನ್ನು ಆದಷ್ಟು ಬೇಗನೇ ರಾಷ್ಟ್ರೀಕರಣ ಮಾಡಿ, ಜನತಾ ಸರಕಾರವೂ ಗುತ್ತೇದಾರಿ ಬಂಡವಾಳಶಾಹಿಗಳ ವಿರೋಧಿ ಎಂದು ಜನರಿಗೆ ತೋರಿಸಿ ತನ್ನ ಸ್ವಪ್ರತಿಷ್ಟೆಯನ್ನು ಯಾಕೆ ಹೆಚ್ಚಿಸಿಕೊಳ್ಳಬಾರದೆಂದು ಫರ್ನಾಂಡಿಸ್‌ರಂತಹ ಕೆಲವು ನಾಯಕರ ತಲೆಗೆ ಥಟ್ಟನೆ ಹೊಳೆದುದರಲ್ಲಿ ಆಶ್ಚರ್ಯವೇನೂ ಇಲ್ಲ. ಸಧ್ಯದ ರಾಷ್ಟ್ರೀಕರಣದ ಪ್ರಸ್ತಾಪವು ಆರ್ಥಿಕ ವ್ಯವಸ್ಥೆಯಲ್ಲಿ ಮೂಲಭೂತವಾದ ಬದಲಾವಣೆಯನ್ನುಂಟುಮಾಡುವ ಉದ್ದೇಶವನ್ನಿಟ್ಟುಕೊಂಡಿಲ್ಲ. ಅದೊಂದು ಗಂಭೀರವಾದ ತಾತ್ವಿಕ ವಿವಾದವೂ ಆಗಿಲ್ಲ. TISCO ರಾಷ್ಟ್ರೀಕರಣಕ್ಕೆ ಟಾಟಾ ಒಪ್ಪಿದರೆ, ಅವರನ್ನೇ ದೇಶದ ಎಲ್ಲಾ ಉಕ್ಕು ಉದ್ದಿಮೆಗಳ ಮೇಲ್ವಿಚಾರಣೆಯ ಸಂಸ್ಥೆಯಾದ ಸ್ಟೀಲ್ ಅಥಾರಿಟಿ ಇಂಡಿಯಾ ಲಿಮಿಟೆಡ್ (SAIL)ನ ಅಧ್ಯಕ್ಷ ಪದವಿಗೇರಿಸಲಾಗುವುದೆಂದು ಬಿಜುಪಾಟ್ನಾಯಕ್ ಟಾಟಾರಿಗೆ ಬರೆದ ಒಂದು ರಹಸ್ಯ ಪತ್ರದಿಂದ ತಿಳಿದು ಬಂದಿದೆ. ಆದುದರಿಂದ ರಾಷ್ಟ್ರೀಕರಣದ ಪರ ವಿರೋಧಿಗಳ ಈಗಿನ ವಾದವಿವಾದಗಳು ಬಂಡವಾಳಶಾಹಿ ಪದ್ಧತಿಯನ್ನು ಜನಪ್ರಿಯಗೊಳಿಸಿ ಪುರೋಗಾಮಿ ಸಮಾಜವಾದಿ ಎಂದು ನಂಬಿಸಿ ಮುಂದುವರಿಸುವುದು ಹೇಗೆ ಎಂಬ ಸಮಸ್ಯೆಯ ಸುತ್ತ ಹರಡಿವೆ.

ಸಾರ್ವಜನಿಕಕ್ಷೇತ್ರ-ಖಾಸಗೀ ಕ್ಷೇತ್ರದ ಸಹಾಯಕ ಕ್ಷೇತ್ರ:

ಬಂಡವಾಳಶಾಹಿ ಆರ್ಥಿಕ ಪದ್ಧತಿಯು ತೀವ್ರ ಬಿಕ್ಕಟ್ಟನ್ನು ಅನುಭವಿಸುತ್ತಿರುವಾಗ ರಾಷ್ಟ್ರೀಕರಣದ ಪ್ರಶ್ನೆಯು ಸ್ವಾತಂತ್ರ್ಯೋತ್ತರದಲ್ಲಿ ಆಗಾಗ ತಲೆದೋರಿದ್ದುಂಟು. ನಮ್ಮ ದೇಶದಲ್ಲಿ, ಇತರ ಬಂಡವಾಳಶಾಹಿ ದೇಶಗಳಂತೆಯೇ, ರಾಷ್ಟ್ರೀಕರಣವು ಹೆಚ್ಚಾಗಿ ಖಾಸಗೀಕ್ಷೇತ್ರದ ರೋಗಗ್ರಸ್ಥ ಕೈಗಾರಿಕಾ ಸಂಸ್ಥೆಗಳಿಗೂ, ಬಂಡವಾಳಶಾಹಿಗಳು ಸ್ವತಂತ್ರವಾಗಿ ನಿರ್ವಹಿಸಲು ಹಿಂಜರಿಯುವ ಭಾರೀ ಉದ್ಯಮಗಳಿಗೂ, ಖಾಸಗೀಬಂಡವಾಳಶಾಹಿಗಳ ಹಿತಾಸಕ್ತಿಗಳಿಗೆ ಹೆಚ್ಚಿನತೊಂದರೆಯಾಗದಂತೆ ಜನಪ್ರಿಯತೆಗಳಿಸಬಹುದಾದ ಕೈಗಾರಿಕಾಸಂಸ್ಥೆಗಳಿಗೂ ಮೀಸಲಾಗಿರುವುದನ್ನು ಗಮನಿಸಬಹುದು. ಬಂಡವಾಳಶಾಹಿ ಪದ್ಧತಿಯು ಮುಂದುವರಿಯುವುದರಲ್ಲಿ ಆಸಕ್ತಿ ಇರುವ ದೂರದೃಷ್ಟಿಯವರು ತಮ್ಮ ತತ್ಕಾಲದ ವೈಯಕ್ತಿಕ ಹಿತಾಸಕ್ತಿಯನ್ನು ಬದಿಗಿಟ್ಟು ಇಂತಹ ಪರಿಮಿತಿ ರಾಷ್ಟ್ರೀಕರಣವನ್ನು ಸ್ವಾಗತಿಸುವರು. ವೈಯಕ್ತಿಕ ಹಿತಾಸಕ್ತಿಯನ್ನೇ ಪ್ರಧಾನವಾಗಿಟ್ಟುಕೊಂಡ ಸಂಕುಚಿತ ದೃಷ್ಟಿಯವರು ಇಂತಹ ಪರಿಮಿತಿ ರಾಷ್ಟ್ರೀಕರಣಕ್ಕೂ ತಮ್ಮ ವಿರೋಧದ ಗುಲ್ಲೆಬ್ಬಿಸುವರು. ಅಂತಿಮವಾಗಿ ಈ ತೋರಿಕೆಯ ತಾತ್ವಿಕ ಘರ್ಷಣೆಯಲ್ಲಿ ದೂರದೃಷ್ಟಿಯ ಮುತ್ಸದ್ದಿಗಳೇ ಕೆಲವೊಮ್ಮೆ ಮೇಲ್ಗೈ ಪಡೆದರೂ, ಬಂಡವಾಳಶಾಹಿ ಪದ್ಧತಿಯ ಬಿಕ್ಕಟ್ಟನ್ನು ಇವರೂ ಬಗೆಹರಿಸಲಾಗದೆ, ಅದರ ಅವಸಾನದ ಕಾಲವನ್ನು ಸ್ವಲ್ಪ ಮುಂದುವರಿಸಬಲ್ಲರು, ಅಷ್ಟೆ.

1950ರ ದಶಕದಲ್ಲಿ ನೆಹರೂ ಕಾಲದಲ್ಲಿ 'ಸಮಾಜವಾದಿ ಮಾದರಿ'ಯ ಪಂಚವಾರ್ಷಿಕ ಯೋಜನೆಗಳು ಆರಂಭವಾದಾಗ, ಯೋಜನೆಯಲ್ಲಿ ಸಾರ್ವಜನಿಕಕ್ಷೇತ್ರದ ವಿಶೇಷ ಪಾತ್ರದ ಕುರಿತು ಆಳುವವರ್ಗದ ಪಕ್ಷವಾದ ಕಾಂಗ್ರೆಸ್‌ನಲ್ಲಿ ಭಿನ್ನಾಭಿಪ್ರಾಯ ತಲೆದೋರಿ ಈಗಿನ ಜನತಾಪಕ್ಷದ ಘಟಕಗಳಾದ ಜನಸಂಘ ಮತ್ತು ಸ್ವತಂತ್ರ ಪಕ್ಷಗಳು ಹುಟ್ಟಿಕೊಂಡವು. 'ಸಮಾಜವಾದಿ ಮಾದರಿ'ಯು ಬಡತನ, ನಿರುದ್ಯೋಗ, ಬೆಲೆ ಏರಿಕೆ, ಆರ್ಥಿಕಕೇಂದ್ರೀಕರಣ ಇತ್ಯಾದಿಗಳಿಗೆ ಕಾರಣವಾಗಿ ಆರ್ಥಿಕ ರಾಜಕೀಯ ಬಿಕ್ಕಟ್ಟು ತಲೆದೋರಿತು. ಆದರಿಂದ ಪಾರಾಗಲು, 1960ರ ದಶಕದ ಅಂತ್ಯದಲ್ಲಿ ಇಂದಿರಾಗಾಂಧಿ ಕಾಲದಲ್ಲಿ 'ಗರೀಬಿಹಟಾವೊ', 'ಗುತ್ತೇದಾರಿ ನಿಯಂತ್ರಣ' ಮುಂತಾದ ಘೋಷಣೆಗಳೊಂದಿಗೆ ಬ್ಯಾಂಕು ರಾಷ್ಟ್ರೀಕರಣ ಕೈಗೊಂಡಾಗ, ಅದನ್ನು ವಿರೋಧಿಸಿದ ಕಾಂಗ್ರೆಸ್ಸಿನ ಬಣ ಈಗಿನ ಜನತಾಪಕ್ಷದ ಘಟಕವಾದ ಸಂಸ್ಥಾ ಕಾಂಗ್ರೆಸ್ ಆಗಿ ಉಳಿದುಕೊಂಡಿತು. 1970ರ ದಶಕದ ಅಂತ್ಯದಲ್ಲಿ ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿಯೂ, ಬಂಡವಾಳಶಾಹಿ ಪದ್ಧತಿಯಿಂದ ಉಂಟಾದ ಆರ್ಥಿಕ ದುಃಸ್ಥಿತಿಯು ಹೆಚ್ಚುತ್ತಲೇ ಇರುವುದರಿಂದ, ಅದರ ವಿರುದ್ಧ ದುಡಿಯುವ ಜನರು ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳ ನೇತೃತ್ವದಲ್ಲಿ ಸಂಘಟಿತ ಹೋರಾಟ ನಡೆಸುತ್ತಿರುವಾಗ, ಜನತಾ ಸರಕಾರದ ಅಧಿಕಾರವು ಅಲುಗಾಡುತ್ತಿದೆ. ಅದರ ಅಧಿಕಾರ ಭದ್ರತೆಗಾಗಿ ಜನಪ್ರಿಯತೆಗಳಿಸಲು ಜನತಾಪಕ್ಷದ ಮಾಜಿ ಸೋಶಲಿಸ್ಟರು ಮತ್ತು ತೀವ್ರಗಾಮಿ ಕಾಂಗ್ರೆಸ್ಸಿಗರು ಪುನಃ ರಾಷ್ಟ್ರೀಕರಣದ ಪ್ರಸ್ತಾಪವನ್ನು ಮಾಡುತ್ತಿದ್ದಾರೆ.

ಜನತಾಪಕ್ಷದ ಮಾಜಿ ಘಟಕಗಳಾದ ಜನಸಂಘ, ಸ್ವತಂತ್ರ, ಸಂಸ್ಥಾ ಕಾಂಗ್ರೆಸ್ ಪಕ್ಷಗಳ ನಾಯಕರು-ಪ್ರಧಾನಿ ಮುರಾರ್ಜಿ ದೇಸಾಯಿಯೂ ಸೇರಿದಂತೆ, ಆರ್ಥಿಕ ವ್ಯವಸ್ಥೆಯಲ್ಲಿ ಸಾರ್ವಜನಿಕ ಕ್ಷೇತ್ರದ ಪಾತ್ರವನ್ನಾಗಲೀ, ಆರ್ಥಿಕ ಯೋಜನೆಯನ್ನಾಗಲೀ ಇಂದು ವಿರೋಧಿಸುವುದಿಲ್ಲ. ಕಾರಣ ಅವುಗಳು ಬಂಡವಾಳಶಾಹಿಗಳಿಗೂ ಭೂಮಾಲಕರಿಗೂ ಗಣನೀಯವಾಗಿ ಸಹಕಾರಿಯಾಗಿವೆ ಎಂದು ಇಷ್ಟರಲ್ಲಿಯೇ ಅವರು ಮನಗಂಡಿದ್ದಾರೆ. ಅವರು ಬೆಂಬಲಿಸುವ ವೈಯಕ್ತಿಕ ಗುತ್ತೇದಾರಿ ಕುಟುಂಬಗಳ ಸಂಕುಚಿತ ಹಿತಾಸಕ್ತಿಗಳ ದೃಷ್ಟಿಯಿಂದ ಮಾತ್ರ ಹೊಸ ಕೈಗಾರಿಕೆಗಳ ರಾಷ್ಟ್ರೀಕರಣವನ್ನು ವಿರೋಧಿಸುತ್ತಿದ್ದಾರೆ. ಅಷ್ಟೆ. ರಾಷ್ಟ್ರೀಕರಣದ ಪರವಾಗಿರುವವರೂ ಸಧ್ಯದ ಮಿಶ್ರಆರ್ಥಿಕ ನೀತಿಯನ್ನು ಕೈಬಿಡುವರೆಂಬ ಬೊಬ್ಬೆಯು ನಿರಾಧಾರವಾಗಿದೆ. ಹಾಗೆಯೇ, ಒಂದೆರಡು ಕೈಗಾರಿಕೆಗಳನ್ನು ರಾಷ್ಟ್ರೀಕರಿಸಿ ಗುತ್ತೇದಾರಿ ಬಂಡವಾಳಶಾಹಿಗಳನ್ನು ನಿಯಂತ್ರಿಸುವೆವು ಎಂದು ಘೋಷಿಸುವುದೂ ಹಾಸ್ಯಾಸ್ಪದ. ಇಷ್ಟರಲ್ಲಿಯೇ ಗುತ್ತೇದಾರಿ ನಿಯಂತ್ರಣ ಕಾಯಿದೆಯಿಂದ ತಪ್ಪಿಸಿಕೊಳ್ಳಲು ಮಫತ್

(7ನೇ ಪುಟ ನೋಡಿ)

ಚೀನದ ಕಮ್ಯುನಿಸ್ಟ್ ನಾಯಕತ್ವದ ತಪ್ಪು ಸಿದ್ಧಾಂತಗಳು

ಎಂ. ಬಸವಪುನ್ನಯ್ಯ

ಚೀನಿ ಸೈನ್ಯಪಡೆಗಳನ್ನು ವಾಪಸ್ಸು ಕರೆಸಿಕೊಂಡಿರುವುದರಿಂದ ಚೀನವು ವಿಯೆಟ್ನಾಮಿನ ಮೇಲೆ ನಡೆಸಿದ ನಾಲ್ಕುವಾರಗಳ ಯುದ್ಧವೇನೋ ನಿಂತಿದೆ. ಆದರೆ ಅದು ಸರಿಯಾದ ಅರ್ಥದಲ್ಲಿ ನಿಂತಿಲ್ಲ. ಅಲ್ಲದೆ, ವಿವಾದಾಸ್ಪದ ವಿಚಾರಗಳನ್ನು ಶಾಂತಿಯುತವಾಗಿ ಪರಿಹರಿಸುವ ಮಾತುಕತೆಗಳು ಇನ್ನೂ ಆರಂಭವಾಗಿಲ್ಲ. ಎಲ್ಲಾ ಸಂಗತಿಗಳನ್ನೂ ಗಮನಿಸಿದರೆ ಇದೊಂದು ಶೀತಲಯುದ್ಧವಾಗಿ ಮುಂದುವರೆಯುವಂತೆ ಕಾಣುತ್ತದೆ. ಚೀನದ ಕಮ್ಯುನಿಸ್ಟ್ ನಾಯಕತ್ವವು ವಿಯೆಟ್ನಾಮಿನ ಪ್ರದೇಶದೊಳಗೆ ಅತಿಕ್ರಮಿಸಿ ತಾನೊಂದು ರಾಜಕೀಯ ಮತ್ತು ಮಿಲಿಟರಿ ದುಷ್ಟಶಕ್ತಿ ಎಂಬುದನ್ನು ಸ್ಥಾಪಿಸಿಕೊಂಡಿದೆ.

ಇನ್ನೊಂದು ಸಮಾಜವಾದಿ ದೇಶವಾದ ವಿಯೆಟ್ನಾಮಿನ ಮೇಲೆ ಈ ಮಿಲಿಟರಿ ಕೃತ್ಯವನ್ನು ನಡೆಸಿರುವುದರಿಂದ ಚೀನದ ನಾಯಕತ್ವವು ಭಾರಿ ನಷ್ಟವನ್ನು ಉಂಟುಮಾಡಿ ವಿಯೆಟ್ನಾಮಿನ ಪುನರ್ರಚನೆಯ ಕೆಲಸಕ್ಕೆ ಅಗಾಧ ಧಕ್ಕೆಯನ್ನೂ ತಂದೊಡ್ಡಿದೆ. ಈ ಕೆಲಸದಲ್ಲಿ ತನಗೂ ಮಾನವರ ಮತ್ತು ವಸ್ತುಗಳ ವಿಚಾರದಲ್ಲಿ ಅಪಾರ ನಷ್ಟ ಮಾಡಿಕೊಂಡಿದೆ. 800-900 ಮಿಲಿಯನ್ ಜನತೆಯುಳ್ಳ ಒಂದು ದೊಡ್ಡ ಸಮಾಜವಾದಿ ದೇಶವು ಮುಖ ಕಳೆದುಕೊಂಡಿದೆ. ಚೀನದ ಕಮ್ಯುನಿಸ್ಟ್ ನಾಯಕರು ಈ ದುರಂತದಿಂದ ಪಾಠ ಕಲಿಯುವರೋ ಅಥವಾ ಇನ್ನಷ್ಟು ದೊಡ್ಡ ದುರಂತವನ್ನು ಆಹ್ವಾನಿಸಲು ಮತ್ತೆ ದಾರಿ ಬದಲಿಸುವರೋ ಕಾಲವೇ ಹೇಳಬೇಕು.

ಆದರೆ, ಚೀನದ ಜನತೆಯ ಸಾಮ್ರಾಜ್ಯಶಾಹಿ ವಿರೋಧಿಯಾದ ಅದ್ಭುತ ಪರಂಪರೆ, ಚೀನದ ಕ್ರಾಂತಿಯಾದ ಕಳೆದ ಮುವ್ವತ್ತು ವರ್ಷಗಳಲ್ಲಿ ಅವರು ದೇಶವನ್ನು ಕಟ್ಟುವುದಕ್ಕೆ ನಿರ್ಮಿಸಿರುವ ಸಮಾಜವಾದಿ ಮತ್ತು ಪ್ರಜಾಸತ್ತಾತ್ಮಕ ಸಾಮಾಜಿಕ-ಆರ್ಥಿಕ ತಳಹದಿ, ಕಳೆದ ಐವತ್ತು ವರ್ಷಗಳಿಂದಲೂ ಚೀನದ ಕಾರ್ಮಿಕ ವರ್ಗಕ್ಕೆ ಬೋಧಿಸಲಾಗಿರುವ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ವಿಚಾರಗಳು ಮತ್ತು ಕಾರ್ಮಿಕ ಅಂತರರಾಷ್ಟ್ರೀಯತೆಯ ಭಾವನೆ ಇವೆಲ್ಲವೂ ನಮ್ಮಲ್ಲಿ ಭರವಸೆ ಹುಟ್ಟಿಸಿ, ಚೀನದ ಕಮ್ಯುನಿಸ್ಟ್‌ಪಕ್ಷದಲ್ಲಿರುವ ಆರೋಗ್ಯಕರ ಶಕ್ತಿಗಳು ಮುಂದೆ ಬಂದು, ಸಮಾಜವಾದಿ ಸೋವಿಯತ್ ಒಕ್ಕೂಟವನ್ನು ಜಗತ್ತಿನ ಮೊದಲನೇ ಶತ್ರು ಎಂದು ಭಾವಿಸಿ, ಅದನ್ನು "ಸಮಾಜವಾದಿ-ಸಾಮ್ರಾಜ್ಯಶಾಹಿ" ಮತ್ತು ಫ್ಯಾಸಿಸ್ಟ್ ಎಂದು ಆರೋಪಿಸುವ ಆ ವಿನಾಶಕಾರಿ "ಮೂರುಜಗತ್ತುಗಳ" ನೀತಿಯನ್ನು ಬದಲಿಸುವರೆಂಬ ಆಸೆ ಮೂಡಿಸುತ್ತದೆ.

ವಿಶಿಷ್ಟ ರಾಜಕೀಯ :

ಪ್ರಸಿದ್ಧವಾದ ಚಾರಿತ್ರಿಕ ಹೇಳಿಕೆ ಬೋಧಿಸುವ ಹಾಗೆ ಯುದ್ಧ ಎಂದರೆ ರಾಜಕೀಯದ ಮುಂದುವರಿಕೆಯೇ. ವಿಯೆಟ್ನಾಮಿನ ಮೇಲೆ ಚೀನ ನಡೆಸಿದ ಈ ಯುದ್ಧವನ್ನೂ ಈ ವಿಶಿಷ್ಟ ರಾಜಕೀಯದ ದಾರಿಯಲ್ಲೇ ಗುರುತಿಸಬೇಕಾಗುತ್ತದೆ. ಇದು ಸಮಾಜವಾದದಿಂದ ಬಂಡವಾಳಶಾಹಿಗೆ, ಸಾಮ್ರಾಜ್ಯಶಾಹಿಗೆ ಮತ್ತು ಫ್ಯಾಸಿಸಂಗೆ ಮನಸ್ಸು ಬಂದ ಹಾಗೆ ಬದಲಾಗುವಂಥ ರಾಜಕೀಯ! ನವೆಂಬರ್ 1964 ರಷ್ಟು ಹಿಂದೆಯೇ ಚೀನದ ಕಮ್ಯುನಿಸ್ಟ್ ಪಕ್ಷವು ಕ್ರುಶ್ಚೇವರ ನೀತಿಯನ್ನು ಖಂಡಿಸುತ್ತಾ "ಇದು ಸಮಾಜವಾದದ ವಿರುದ್ಧ ಸಾಮ್ರಾಜ್ಯಶಾಹಿಯ ಜೊತೆ ಮೈತ್ರಿ ಮಾಡಿಕೊಳ್ಳುವಂಥ ನೀತಿ; ಚೀನದ ವಿರುದ್ಧ ಅಮೆರಿಕಾದ ಜೊತೆ ಹೊಂದಾಣಿಕೆ ಮಾಡಿಕೊಳ್ಳುವ ನೀತಿ. ಇದು ಎಲ್ಲೆಡೆಯ ರಾಷ್ಟ್ರೀಯ ವಿಮೋಚನಾ ಚಳುವಳಿಗಳು ಮತ್ತು ಜನತೆಯ ಕ್ರಾಂತಿಗಳ ವಿರುದ್ಧ ಪ್ರತಿಗಾಮಿಗಳ ಸಂಗಡ ಹೊಂದಾಣಿಕೆ ಮಾಡಿಕೊಳ್ಳುವಂಥದ್ದು" ಎಂದು , ಹೇಳಿತ್ತು. ಮತ್ತು "ಸೋವಿಯೆತ್ ಒಕ್ಕೂಟದ ಮಹಾನ್ ಕಮ್ಯುನಿಸ್ಟ್ ಪಕ್ಷ, ಕ್ರಾಂತಿಕಾರಿ ಪರಂಪರೆಯನ್ನುಳ್ಳ ಸೋವಿಯೆತ್ ಒಕ್ಕೂಟದ ಮಹಾಜನತೆ, ಇವರೆಲ್ಲರೂ ಮಹಾನ್ ಸಮಾಜವಾದಿ ಸಾಧನೆಗಳನ್ನು ರಕ್ಷಿಸಲು, ಲೆನಿನ್‌ನಿಂದ ಸ್ಥಾಪಿತವಾದ ಮೊತ್ತಮೊದಲ ಸಮಾಜವಾದಿ ಅಧಿಕಾರದ ಅಪಾರ ಪ್ರತಿಷ್ಠೆಯನ್ನು ಮಾರ್ಕ್ಸ್‌ವಾದ-ಲೆನಿನ್‌ವಾದದ ಶುದ್ಧತೆಯನ್ನು, ಕಾರ್ಮಿಕವರ್ಗದ ಕ್ರಾಂತಿಕಾರಿ ಧ್ಯೇಯದ ಪ್ರಗತಿಶೀಲ ಮುನ್ನಡೆಯನ್ನು ಕಾಪಾಡಲು ಸಂಪೂರ್ಣವಾಗಿ ಶಕ್ತರಾಗಿದ್ದಾರೆ" ಎಂದೂ ಹೇಳಿತ್ತು. (ಸಾಮಾನ್ಯ ನೀತಿಯ ಬಗ್ಗೆ ಚರ್ಚೆ, ವಿದೇಶಿ ಭಾಷಾಮುದ್ರಣಾಲಯ, ಪೀಕಿಂಗ್ 1965, ಪು 482)

ಇದೆಲ್ಲವೂ ಹಗಲಾಗುವುದರೊಳಗೆ ಮಾಯವಾಗಿಬಿಟ್ಟಿತು! 1966ರ ಹೊತ್ತಿಗೆ ಮಾವೋತ್ಸೆತುಂಗ್ ಮತ್ತು ಇತರ ಕಮ್ಯುನಿಸ್ಟ್ ನಾಯಕರ ಪ್ರಕಾರ ಸೋವಿಯತ್ ರಷ್ಯಾದ ಸಮಾಜವಾದವು ಬಂಡವಾಳಶಾಹಿಯಾಗಿ ಸಾಮ್ರಾಜ್ಯಶಾಹಿಯಾಗಿ ಮತ್ತು ಫ್ಯಾಸಿಸಂ ಆಗಿ ಪರಿವರ್ತನೆಯಾಗಿಬಿಟ್ಟಿತು. ಕ್ರುಶ್ಚೇವರ ನಾಯಕತ್ವದ ಸೋವಿಯೆತ್ ಒಕ್ಕೂಟದ ಕಮ್ಯುನಿಸ್ಟ್‌ಪಕ್ಷವು ಕೆಲವು ಬಲ-ಪರಿಷ್ಕರಣವಾದಿ ನೀತಿಗಳನ್ನು ಅನುಮೋದಿಸುತ್ತಿದೆ ಎಂಬ ವಿಮರ್ಶೆಯು ಹಗಲಾಗುವುದರೊಳಗೆ ಸೋವಿಯೆತ್ ರಷ್ಯವು ಒಂದು ಸಾಮ್ರಾಜ್ಯಶಾಹಿ ಮತ್ತು ಫ್ಯಾಸಿಸ್ಟ್ ಶಕ್ತಿ ಎಂಬ ಖಂಡನೆಯಾಗಿ ಬದಲಾಗಿಬಿಟ್ಟಿತು. "ಮಹೋನ್ನತಿಯಿಂದ ಕ್ಷುದ್ರತೆಗೆ ಇಳಿಯಲು ಒಂದೇ ಒಂದು ಮೆಟ್ಟಿಲು" ಎಂಬ ಹಳೆಗಾದೆ ಇಲ್ಲಿಗೆ ಸರಿಹೊಂದುತ್ತದೆ. ಸೋವಿಯೆತ್ ರಷ್ಯವನ್ನು ಸಾಮ್ರಾಜ್ಯಶಾಹಿ ಮತ್ತು ಫ್ಯಾಸಿಸ್ಟ್ ಎಂದು ಇದ್ದಕ್ಕಿದ್ದಂತೆ ಖಂಡಿಸಿರುವುದು ಮತ್ತು ತಮ್ಮ ಈ ತೀರ್ಪನ್ನು ಸಮರ್ಥಿಸಲು ಮಾರ್ಕ್ಸ್‌ವಾದಿ-ಲೆನಿನ್‌ವಾದಿ ವಿವರಣೆಯನ್ನು ಕೊಡಲು ಒಪ್ಪದಿರುವುದು ಇವೆಲ್ಲವೂ ವಿಜ್ಞಾನ ಮತ್ತು ಸತ್ಯಗಳಿಗೆ ಹೊಂದುವುದಿಲ್ಲ. ಸೋವಿಯೆತ್ ರಷ್ಯದ ನಾಯಕರ ವಿರುದ್ಧ "ಮಾರಾಮಾರಿ" ಕದನ ನಡೆಸುವಾಗ ಚೀನದ ನಾಯಕರು ಅನುಸರಿಸಿದ್ದು ಇದೆಲ್ಲವನ್ನೇ.

ಇಂಥ ವಿನಾಶಕಾರಿ ತಪ್ಪುಗಳು ಹೇಗೆ ಆದವು ?

ಚೀನದ ಕಮ್ಯುನಿಸ್ಟ್ ಪಕ್ಷವನ್ನು ಕಟ್ಟಿ 1949-50ರ ಚೀನೀ ಕ್ರಾಂತಿಯನ್ನು ಸಫಲವಾಗಿ ನಡೆಸಿದ ಮಾವೋತ್ಸೆತುಂಗ್ ಮತ್ತಿತರ ಕಮ್ಯುನಿಸ್ಟ್ ನಾಯಕರು ಮಹಾನ್ ವ್ಯಕ್ತಿಗಳೆನ್ನುವುದರಲ್ಲಿ ಸಂದೇಹವಿಲ್ಲ. ಲೆನಿನ್ ಹೇಳಿದ ಹಾಗೆ, "ಹೋರಾಟದ ಅವಧಿಯಲ್ಲಿ ಮಹಾನ್ ಕ್ರಾಂತಿಗಳು ಮಹಾನ್ ವ್ಯಕ್ತಿಗಳನ್ನು ಬೆಳಕಿಗೆ ತರುತ್ತವೆ ಮತ್ತು ಹಿಂದೆ ಅಸಾಧ್ಯವಾಗಿ ಕಾಣಿಸುತ್ತಿದ್ದ ಪ್ರತಿಭೆಗಳು ಆಗ ಬೆಳವಣಿಗೆ ಪಡೆಯುತ್ತದೆ ಎಂಬುದನ್ನು ಚರಿತ್ರೆ ಬಹುಹಿಂದೆಯೇ ತೋರಿಸಿಕೊಟ್ಟಿದೆ". (ಲೆನಿನ್, ಸಮಗ್ರ ಕೃತಿಗಳು ಸಂಪುಟ 29, ಪು 93)

ಆದರೆ ಮಹಾನ್ ಕಾರ್ಯಗಳನ್ನು ನಡೆಸಲು ಸಮರ್ಥರಾದ ಮಹಾನ್ ವ್ಯಕ್ತಿಗಳು ಮಹಾ ಅಪರಾಧಗಳನ್ನು ಮಾಡಲೂಬಹುದೆಂಬುದನ್ನು ಚರಿತ್ರೆ ತೋರಿಸಿಕೊಟ್ಟಿದೆ. ಲೆನಿನ್ ತುಂಬ ಸರಿಯಾಗಿ ಗುರುತಿಸಿದ ಹಾಗೆ "ಮನುಷ್ಯರ ದೋಷಗಳು, ನಮಗೆ ಹಿಂದಿನಿಂದಲೂ ಗೊತ್ತಿರುವ ಹಾಗೆ ಅವರ ಗುಣಗಳ ಜೊತೆ ಬೆಸೆದುಕೊಂಡಿರುತ್ತವೆ" ಮತ್ತು "ಇದು ಅನೇಕ ಕಮ್ಯುನಿಸ್ಟ್ ಮುಂದಾಳುಗಳಿಗೆ ಅನ್ವಯಿಸುತ್ತದೆ." (ಲೆನಿನ್, ಸಮಗ್ರ ಕೃತಿಗಳು ಸಂಪುಟ 32, ಪು. 145)

ದಶಕಗಳ ಕಾಲ ಕ್ರಾಂತಿಕಾರಿ ಹೋರಾಟದಲ್ಲಿ ಪಳಗಿದ ಕಮ್ಯುನಿಸ್ಟ್ ನಾಯಕತ್ವವೂ ಕೂಡ, "ಮೂರು ಜಗತ್ತು"ಗಳ ಸಿದ್ಧಾಂತದ ರಚನೆ, ಸಮಾಜವಾದಿ ಸೋವಿಯೆತ್ ರಷ್ಯವನ್ನು ಸಾಮ್ರಾಜ್ಯಶಾಹಿ ಮತ್ತು ಫ್ಯಾಸಿಸ್ಟ್ ಎಂದು ಬದಲಾಯಿಸುವ ಸಿದ್ಧಾಂತ, ಸಾಮ್ರಾಜ್ಯಶಾಹಿ ಅಮೆರಿಕಾ, ಬ್ರಿಟನ್, ಪ. ಜರ್ಮನಿ, ಜಪಾನ್‌ಗಳ ಜೊತೆ ಸಮಾಜವಾದಿ ಚೀನವೂ ಸೇರಿಕೊಂಡು ಸೋವಿಯೆತ್ ಒಕ್ಕೂಟದ ವಿರುದ್ಧ ಐಕ್ಯಕಾರ್ಯಾಚರಣೆ ನಡೆಸುವಂಥ ಅಪಾಯಕಾರಿ ಸಿದ್ಧಾಂತದ ರಚನೆ, ಸೋವಿಯೆತ್ ರಷ್ಯಾವನ್ನು ಶಾಂತಿಯ ಮತ್ತು ಮಾನವ ಜನಾಂಗದ ಪ್ರಮುಖ ಶತ್ರು ಎಂದು ಆರೋಪಿಸಿದ್ದು, ರಾಷ್ಟ್ರೀಯ ವಿಮೋಚನಾ ಚಳುವಳಿಗಳಿಗೆ ವಿರೋಧ ವ್ಯಕ್ತಪಡಿಸುವುದು, ಜೈರೆಯ ಮಾಂಬುಟು, ಪೆಟ್ರಿಸ್‌ಲುಮುಂಬಾನ ಕೊಲೆಗಾರ, ಅಲೆಂಡೆಯ ಕೊಲೆಪಾತಕರು ಇರಾನಿನ ಪಾತಕ ಮುಂತಾದ ಕೆಟ್ಟ ಪ್ರತಿಗಾಮಿಗಳೊಂದಿಗೆ ಹೊಂದಾಣಿಕೆ,- ಮುಂತಾದ ವಿನಾಶಕಾರಿ ತಪ್ಪುಗಳನ್ನು ಹೇಗೆ ಮಾಡಿತು ಎಂಬುದನ್ನು ಮೇಲಿನ ಮಾತುಗಳು ಮಾತ್ರ ವಿವರಿಸಬಲ್ಲವು.

ಒಂದು ಪ್ರಶ್ನೆಗೆ ನಮ್ಮ ಉತ್ತರ :

ಚೀನದ ನಾಯಕರ ಬಗ್ಗೆ ಮತ್ತು ಅವರ ನೀತಿಗಳ ಬಗ್ಗೆ ನಾವು ಮಾಡಿರುವ ವಿಮರ್ಶೆಯನ್ನು ಓದಿ ಅನೇಕರು ಕೆಲವು ಪ್ರಶ್ನೆಗಳನ್ನು ಎತ್ತಿದ್ದಾರೆ. ವಿಯೆಟ್ನಾಮಿನ ಮೇಲೆ ಚೀನ ನಡೆಸಿದ ದಾಳಿಯನ್ನು ನಾವು ವಿರೋಧಿಸುವುದು ಏತಕ್ಕೆ ಮತ್ತು ಕಂಪೂಚಿಯದ ಪಾಲ್‌ಪಾಟ್ ಆಳಿಕೆಯ ವಿಚಾರದಲ್ಲಿ ವಿಯೆಟ್ನಾಂನ ಕಮ್ಯುನಿಸ್ಟ್ ಪಕ್ಷವು ಅನುಸರಿಸಿದ ಆದರೆ ಚೀನದ ಪ್ರಕಾರ ತಪ್ಪು ಎನ್ನಿಸಿಕೊಂಡ ನೀತಿಯನ್ನು ನಾವು ಬೆಂಬಲಿಸುವುದು ಏತಕ್ಕೆ ಎಂದು ಪ್ರಶ್ನೆ ಕೇಳುತ್ತಾರೆ. ನಮ್ಮ ಉತ್ತರ ಏನೆಂದರೆ, ಪಾಲ್‌ಪಾಟ್ ಆಳಿಕೆಯ ಬಗ್ಗೆ ವಿಯೆಟ್ನಾಂ ಮಾಡಿದ ವಿವರಣೆಯ ಬಗ್ಗೆ ಮತ್ತು ಅವರ ಆಂತರಿಕ ಮತ್ತು ವಿದೇಶಿ ನೀತಿಗಳ ಬಗ್ಗೆ ಮತ್ತು ಆ ಆಳಿಕೆಯನ್ನು ಕಿತ್ತೊಗೆದ ನೀತಿಗಳು ಮತ್ತು ವಿಯೆಟ್ನಾಂನಿಂದ ಸೋದರ ಸಹಾಯ ಮತ್ತು ಬೆಂಬಲಗಳನ್ನು ಪಡೆದು ಸ್ಥಾಪನೆಯಾದ ಕಂಪೂಚಿಯದ ಹೊಸ ಸರ್ಕಾರದ ಬಗ್ಗೆ ನಮಗೆ ಸಂಪೂರ್ಣ ಭಿನ್ನಾಭಿಪ್ರಾಯವಿದೆ.

ಒಂದು ಸಮಾಜವಾದಿ ಆಳಿಕೆಯು ಇನ್ನೊಂದು ಸಮಾಜವಾದಿ ಆಳಿಕೆಯ ಮೇಲೆ ಸಶಸ್ತ್ರ ದಾಳಿ ನಡೆಸುವ ಹಕ್ಕು ಹೊಂದಿದೆ ಎಂಬ ಸಿದ್ಧಾಂತದ ಬಗ್ಗೆ ಮತ್ತು ಕೆಲವು ವರ್ಷಗಳ ಹಿಂದೆ ಕೆಲವು ವಲಯಗಳಲ್ಲಿ ಬಳಕೆಯಲ್ಲಿದ್ದ "ನಿಯಮಿತ ಸಾರ್ವಭೌಮತ್ವ" ಮುಂತಾದ ಸಿದ್ಧಾಂತಗಳ ಬಗ್ಗೆ ನಮಗೆ ಪೂರ್ಣ ವಿರೋಧವಿದೆ ಎಂದು ನಾವು ಹೇಳುವುದಿಲ್ಲ. ಆದರೆ ಬಂಡವಾಳಶಾಹಿಯಾಗಿರಲಿ ಸಮಾಜವಾದಿಯಾಗಿರಲಿ ವಿವಿಧ ಸ್ವತಂತ್ರ ದೇಶಗಳ ನಡುವೆ ಸಮಾನತೆ ಮತ್ತು ಮಧ್ಯೆ ಪ್ರವೇಶ ಮಾಡದಿರುವಿಕೆ ಎಂಬ ನೀತಿಗೆ ನಾವು ಬದ್ಧರಾಗಿದ್ದೇವೆ.

ನಮ್ಮ ಎಲ್ಲ ತೀರ್ಮಾನಗಳಲ್ಲೂ ನಾವು ಮಾರ್ಕ್ಸ್‌ವಾದ-ಲೆನಿನ್‌ವಾದದಿಂದ ಮತ್ತು ಕಾರ್ಮಿಕ ಅಂತರರಾಷ್ಟ್ರೀಯತೆಯಿಂದ ನಿರ್ದೇಶನ ಪಡೆಯುವುದಕ್ಕೆ ನಾವು ಶ್ರಮಿಸುತ್ತೇವೆ. ಈ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಮತ್ತು ಕಾರ್ಮಿಕ ಅಂತರರಾಷ್ಟ್ರೀಯತೆಯ ದೃಷ್ಟಿಕೋನವೇ ನಾವು, 1957 ಮತ್ತು 1960 ರ ವಿಶ್ವಕಮ್ಯುನಿಸ್ಟ್ ದಾಖಲೆಗಳು ನೀಡಿದ ನಮ್ಮ ಯುಗದ ವಿವರಣೆಯನ್ನು ಒಪ್ಪಿಕೊಳ್ಳುವಂತೆ ಮಾಡಿದೆ.

"ಸಮಕಾಲೀನ ಜಗತ್ತಿನಲ್ಲಿ ಅಮೆರಿಕದ ಸಾಮ್ರಾಜ್ಯಶಾಹಿಯನ್ನು ವಿರೋಧಿಸುವುದು ಅಥವಾ ಹೊಂದಾಣಿಕೆ ಮಾಡಿಕೊಳ್ಳುವುದು, ಸಾಮ್ರಾಜ್ಯಶಾಹಿ ವಿರುದ್ಧದ ಸಂಯುಕ್ತ ರಂಗದಲ್ಲಿ ಒಂದು ರಾಜಕೀಯ ಶಕ್ತಿಯು ಸೇರಬಹುದೇ ಅಥವಾ ಇಲ್ಲವೇ ಎಂಬುದನ್ನು ನಿರ್ಧರಿಸುವ ಅಂಶವೂ ಆಗುತ್ತದೆ" ಎಂದು 1964-65ರಲ್ಲಿ ಚೀನದ ನಾಯಕರು ಘೋಷಿಸಿದಾಗ ಈ ವಿಶ್ವದೃಷ್ಟಿಕೋನವೇ ಅವರಿಗೂ ಮಾರ್ಗದರ್ಶನ ಮಾಡುತ್ತಿತ್ತು. ಚೀನದ ಕಮ್ಯುನಿಸ್ಟ್ ನಾಯಕರು ಈಗ ಈ "ನಿರ್ಣಾಯಕ ಅಂಶ"ವನ್ನು ಕೈಬಿಟ್ಟಿದ್ದಾರೆ.

ಆದರೆ ಈ ಅಂಶವನ್ನು ಕಡೆಗಣಿಸುವುದಕ್ಕೆ ನಮಗೆ ಯಾವ ಕಾರಣವೂ ಇಲ್ಲ. ಅಮೆರಿಕಾ ಸಾಮ್ರಾಜ್ಯಶಾಹಿಯನ್ನು ಶಾಂತಿಯ ಮತ್ತು ಮಾನವ ಜನಾಂಗದ ಭಯಂಕರ ಶತ್ರು ಎಂದು ಅದನ್ನು ವಿರೋಧಿಸುವ ಅಂಶವನ್ನು ಕಡೆಗಣಿಸಲಾಗದು. ಕಿತ್ತೊಗೆಯಲ್ಪಟ್ಟ ಪಾಲ್‌ಪಾಟ್ ಆಳಿಕೆ ಮತ್ತು ವಿಯೆಟ್ನಾಮಿನ ಸರ್ಕಾರಗಳ ನಡುವೆ ಇದ್ದ ಕಲಹದ ಬಗ್ಗೆ ತೀರ್ಮಾನ ತೆಗೆದುಕೊಳ್ಳುವಾಗಲೂ ಈ ಅಂಶವೇ ನಮಗೆ ಮಾರ್ಗದರ್ಶನ ನೀಡಿದ್ದು. ವಾದಗಳು ಮತ್ತು ಪ್ರತಿವಾದಗಳ ಗೋಜಲಿನಲ್ಲಿ ಅನೇಕ ಜನ ತಮ್ಮ ಮಾರ್ಕ್ಸ್‌ವಾದಿ ನೆಲೆಗಳನ್ನು ಕಳೆದುಕೊಂಡು, ನಾವು "ದ್ವಂದ್ವ ನಿಲುವು" ಗಳನ್ನು ಹೊಂದಿದ್ದೇವೆಂದು ದೂಷಿಸುತ್ತಾರೆ. ನಮ್ಮ ಉತ್ತರ ಏನೆಂದರೆ, ನಾವು ಅಂಥ ಯಾವ "ದ್ವಂದ್ವ ನಿಲುವು" ಗಳನ್ನೂ ಹೊಂದಿಲ್ಲ. ನಾವು ಪ್ರತಿ ಘಟನೆಯನ್ನೂ ಅದರ ಗುಣಾವಗುಣಗಳ ಆಧಾರದ ಮೇಲೆ ಪರೀಕ್ಷಿಸಿ ತೀರ್ಪು ಕೊಡುತ್ತೇವೆ. ಎಲ್ಲವನ್ನೂ ಒಂದು ಅಂಶದ ಆಧಾರದ ಮೇಲೆ, ಎಂದರೆ ಸಾಮ್ರಾಜ್ಯಶಾಹಿ ಮತ್ತು ಅದರಲ್ಲೂ ಅಮೆರಿಕಾದ ಸಾಮ್ರಾಜ್ಯಶಾಹಿಯನ್ನು ಉಗ್ರವಾಗಿ ವಿರೋಧಿಸುವ ಅಂಶದ ಆಧಾರದ ಮೇಲೆ ಪರೀಕ್ಷಿಸಿ ತೀರ್ಮಾನ ಕೈಗೊಳ್ಳುತ್ತೇವೆ. ಗುಣಾವಗುಣಗಳನ್ನು ಒತ್ತಟ್ಟಿಗಿಟ್ಟು ನಂತರ ಚರ್ಚಿಸಲು ಬಿಟ್ಟು ಒಂದು ವಿಚಾರವನ್ನು ಮಾತ್ರ ನಾವು ತೀವ್ರವಾಗಿ ಗಮನಿಸುತ್ತೇವೆ. ಅದೆಂದರೆ, ಇಂಡೋಚೀನದ ಒಳಗೆ ಸಾಮ್ರಾಜ್ಯಶಾಹಿಯು ಪ್ರವೇಶಿಸಲು ಬಿಡಬಾರದು. ಈ ಅಂಶವೇ, ವಿಶ್ವಸಂಸ್ಥೆಯ ಭದ್ರತಾಸಮಿತಿಯಲ್ಲಿ ಸೋವಿಯತ್ ವೀಟೋವನ್ನು ನಾವು ಒಪ್ಪಿಕೊಳ್ಳುವಂತೆ ಮಾಡಿದ್ದು.

ಅದೇ ಅಳತೆಗೋಲು ಯಾಕೆ ಬೇಡ?

ಸೋವಿಯೆತ್ ಕಮ್ಯುನಿಸ್ಟ್ ಪಕ್ಷದ ನಾಯಕರು ಅನುಸರಿಸುತ್ತಿರುವ ಬಲ ಪರಿಷ್ಕರಣವಾದಿ ನೀತಿಗಳಿಂದ ಸೋವಿಯೆತ್ ರಷ್ಯವು "ಸಮಾಜವಾದಿ ಸಾಮ್ರಾಜ್ಯಶಾಹಿ" ಯಾಗಿ ಪರಿವರ್ತನೆಗೊಳ್ಳುತ್ತಿರುವ ವಿಚಾರದ ಬಗ್ಗೆ ಮತ್ತು ಈ ಸಿದ್ಧಾಂತದ ಬಗ್ಗೆ ಚೀನದ ಕಮ್ಯುನಿಸ್ಟ್ ನಾಯಕತ್ವವು ಬಹುಕಾಲದಿಂದಲೂ ಮಾತಾಡುತ್ತಿದ್ದು, ಇತ್ತೀಚೆಗೆ, ಡೆಂಗ್‌ಕ್ಸಿಯೋಪಿಂಗರು ಅಮೆರಿಕಾ ಪ್ರವಾಸವನ್ನು ಕೈಗೊಂಡಾಗ ಅದು ತನ್ನ ಶಿಖರವನ್ನು ಮುಟ್ಟಿದ ವಿಚಾರದ ಬಗ್ಗೆ ನಾವು ಕೆಲವು ಮಾತುಗಳನ್ನು ಹೇಳಬೇಕಾಗಿದೆ.

ಸೋವಿಯೆತ್ ನಾಯಕರು ಮಾಡುವ ಬಲಸುಧಾರಣಾವಾದಿ

(5ನೇ ಪುಟ ನೋಡಿ)

ಯುಗ ಪುರುಷ ಸ್ಟಾಲಿನ್

ಲೋಕಸಭೆಯಲ್ಲಿ ನೆಹರು ನೀಡಿದ ಶೋಕಸಂದೇಶ ಭಾಷಣ

“ಇಂದು ಬೆಳಗರಿಯುತ್ತಿರುವಾಗಲೇ ಮಾರ್ಷಲ್ ಸ್ಟಾಲಿನ್ ಕಣ್ಣು ಮುಚ್ಚಿದರು. ಅವರು ಅಸ್ವಸ್ಥತೆಯಿಂದ ಇದ್ದ ವಿಷಯ ನಮಗೆ ಎರಡು ದಿನಗಳ ಮುಂಚಿತವಾಗಿಯೆ ಗೊತ್ತಾಯಿತು. ಇಂದಿಗೆ ಎರಡುವಾರಗಳ ಹಿಂದೆಯೇ ನಮ್ಮ ಮಾಸ್ಕೊ ರಾಯಭಾರಿ ಅವರನ್ನು ಸಂಧಿಸಿದ್ದರು. ಮಾರ್ಷಲ್ ಸ್ಟಾಲಿನ್ ತೀವ್ರ ಅಸ್ವಸ್ಥತೆಯಿಂದಿರುವ ಸುದ್ದಿ ನಮಗೆ ತಲುಪುವುದಕ್ಕೆ ಮುಂಚಿತವಾಗಿ ನಾನು ನಮ್ಮ ರಾಯಭಾರಿ ಜೊತೆಗೆ ನಡೆಸಿದ ಇಷ್ಟಾಗೋಷ್ಠಿ ನಿವೇದಿಕೆಯನ್ನು ನೋಡುತ್ತಿದ್ದೆ. ಸ್ಟಾಲಿನ್‌ರನ್ನು ನೆನೆಸಿಕೊಂಡ ತಕ್ಷಣ ಕನಿಷ್ಟಪಕ್ಷ ನನ್ನಮಟ್ಟಿಗೆ ಬೇರೆ ಬೇರೆ ಯೋಚನೆಗಳು ನನ್ನ ತಲೆಯಲ್ಲಿ ಓಡುತ್ತವೆ. ಕಳೆದ 35 ವರ್ಷದ ಚರಿತ್ರೆಯ ಪುಟಗಳನ್ನೊಮ್ಮೆ ತಿರುಗಿಸಿ ನೋಡಿದಾಗ ಕೆಲವು ಘಟನೆಗಳು ನನ್ನ ಕಣ್ಣಮುಂದೆ ಹರಿಯುತ್ತವೆ. ಇಲ್ಲಿರುವ ನಾವೆಲ್ಲಾ ಈ ಯುಗದ ಎಳೆ ಮಕ್ಕಳು ಮತ್ತು ಅದರ ಪ್ರಭಾವಕ್ಕೆ ಹಲವು ವಿಧವಾಗಿ ಒಳಗಾದವರು. ನಾವು ನಮ್ಮ ದೇಶದಲ್ಲಿ ನಡೆದ ಹೋರಾಟಗಳಲ್ಲಿ ಪಾಲ್ಗೊಂಡದ್ದು ಅಲ್ಲದೆ ಒಂದು ವಿಧದಲ್ಲಿ ನೋಡಿದ್ದೆ ಆದರೆ ಪ್ರಪಂಚದಲ್ಲಿ ನಡೆದ ಅತಿದೊಡ್ಡ ಹೋರಾಟದಲ್ಲಿಯೂ ಸಹಾ ಪಾಲ್ಗೊಂಡಿದ್ದೇವೆ, ಅಥವಾ ಅಂತಹ ಹೋರಾಟಗಳಿಂದ ಪ್ರಭಾವಿತರಾಗಿದ್ದೇವೆ. ಆದುದರಿಂದ ಮತ್ತೆ 35 ವರ್ಷಗಳ ಹಿಂದಕ್ಕೆ ಹೋಗಿ ಚರಿತ್ರೆಯನ್ನು ಅವಲೋಕಿಸಿದಾಗ ಎಷ್ಟೋ ವ್ಯಕ್ತಿಗಳು ಬಂದು ಹೋಗಿರುವರು.

ಆದರೆ ಇಂದಿನವರೆವಿಗೂ ಮಾರ್ಷಲ್ ಸ್ಟಾಲಿನರ ಸರಿಸಾಟಿಯಾಗಿ ಮತ್ತು ಈ ಯುಗದ ಚರಿತ್ರೆಯನ್ನೇ ರೂಪಿಸಿದ ವ್ಯಕ್ತಿ ಮತ್ತೊಬ್ಬರಿಲ್ಲ. ಕ್ರಮ ಕ್ರಮವಾಗಿ ಅವರು ಮಹೋನ್ನತ ವ್ಯಕ್ತಿಯಾಗಿ, ಮತ್ತೊಂದು ಸಾರಿ ನಿಗೂಢವ್ಯಕ್ತಿಯಾಗಿಯೂ, ಮಗದೊಂದುಸಾರಿ ಜನನಾಯಕನಾಗಿ, ಜನತೆಯ ಆತ್ಮೀಯ ಸಂಬಂಧವುಳ್ಳವರಾಗಿಯೂ ಕಂಡವರು.

ಯುದ್ಧ ಸಮಯದಲ್ಲಿಯೂ, ಶಾಂತಿ ಸಮಯದಲ್ಲಿಯೂ ಶ್ರೇಷ್ಠ ವ್ಯಕ್ತಿಯಾಗಿ ನಿರೂಪಿಸಿಕೊಂಡವರಾಗಿದ್ದಾರೆ. ಕೆಲವೇ ಜನಗಳಿಗೆ ಸೀಮಿತವಾಗಿರುವ ಪ್ರಜಾಸಂಕಲ್ಪವನ್ನೂ, ಧೀರೋದಾತ್ತವನ್ನೂ ಸ್ಟಾಲಿನ್‌ರವರು ಪ್ರದರ್ಶಿಸಿದ್ದಾರೆ. ಚರಿತ್ರೆಯನ್ನು ಬರೆಯುವುದಾದರೆ ಅವರ ಅನೇಕ ವಿಷಯಗಳನ್ನು ಕುರಿತು ಹೇಳಬಹುದು, ಬರೆಯಬಹುದು. ಅವರನ್ನು ಬೇರೆ ಬೇರೆ ಜನ ಭಿನ್ನ ವಿಭಿನ್ನ ಅಭಿಪ್ರಾಯಗಳಿಂದ ನೋಡುತ್ತಾರೆ, ಅದು ನನಗೆ ಗೊತ್ತಿಲ್ಲ. ಆದರೆ ಅವರು ಮಹಾ ಉನ್ನತವ್ಯಕ್ತಿ ಎಂಬ ವಿಷಯವನ್ನು ಮಾತ್ರ ಎಲ್ಲಾ ಜನಸಮುದಾಯ ಅಂಗೀಕರಿಸುತ್ತದೆ. ಸಮಕಾಲೀನ ಯುಗದ ಭವಿಷ್ಯತ್ತನ್ನು ರೂಪಿಸಿ ತಿದ್ದಿದ ಕೆಲವೇ ಜನರಲ್ಲಿ ಸ್ಟಾಲಿನ್ ಒಬ್ಬರು. ಯುದ್ಧ ನಿರ್ವಹಣೆಯಲ್ಲಿ ಅವರು ಅದ್ಭುತ ಜಯವನ್ನು ಗಳಿಸಿದರೂ, ಮಹತ್ತರವಾದ ಸೋವಿಯತ್ ದೇಶವನ್ನು ನಿರ್ಮಿಸಿದವರಾಗಿಯೇ ನಮ್ಮ ಜ್ಞಾಪಕಕ್ಕೆ ಬರುತ್ತಾರೆ. ಅವರು ಸಾಧಿಸಿದ ಪ್ರಚಂಡವಾದ ಜಯ ಅದೊಂದೆ. ಈ ವಿಜಯದೊಟ್ಟಿಗೆ ಗಮನಿಸಬೇಕಾದ ವಿಷಯವು ಕೆಲವೇ ಜನರನ್ನು ಕುರಿತು ಹೇಳಿಕೊಳ್ಳಬೇಕಾದ ಒಂದು ವಿಷಯವಾಗಿದೆ. ನಾನು ಇದುವರೆವಿಗೂ ಹೇಳಿದಂತೆ ತನ್ನ ಪರಿಸರದ ಜನತೆಗೆ ಸ್ಟಾಲಿನ್‌ರವರು ಸೀಮಿತವಾಗದೆ, ಅಪಾರವಾದ ಮಾನವ ಸಂತತಿಗೆ ಒಂದು ರೀತಿಯಾಗಿ “ಆತ್ಮೀಯರಾಗಿದ್ದಾರೆ”. ಒಂದು ವಿಧದಲ್ಲಿ ಹೇಳಬೇಕೆಂದರೆ ಯಾವ ಸೋವಿಯೆತ್ ಜನತೆಯೊಟ್ಟಿಗೆ ಅವರು ಸ್ನೇಹಿತರಾಗಿಯೂ, ಹತ್ತಿರದ ಸಂಬಂಧಿಯಾಗಿಯೂ, ಒಂದೇ ಕುಟುಂಬದವರಾಗಿಯೂ, ಕಡೆಕಾಲದವರೆವಿಗೂ ಉಳಿದರು. ಆ ಸೋವಿಯೆತ್ ದೇಶದ ಜನತೆಯಲ್ಲದೆ ಇತರೆ ದೇಶದ ಜನತೆಯೂ ಸಹಾ ಅವರನ್ನು ಬಹು ಪ್ರೀತಿ, ಆತ್ಮೀಯತೆಯಿಂದ ಕಾಣುತ್ತಿತ್ತು. ಆದುದರಿಂದಲೇ ಅವರು ತನ್ನ ಜೀವನದ ಕಾಲದಲ್ಲಿ ಎಲ್ಲಾ ಜನತೆಯ ಅಪಾರ ಗೌರವ, ಪ್ರೀತಿಗೆ ಪಾತ್ರರಾಗಿದ್ದಾರೆ.

ಅವರು ಅತಿ ಕ್ಲಿಷ್ಟ ಸಮಯದಲ್ಲಿ ಕರ್ತವ್ಯ ನಿರ್ವಹಣೆ ಮಾಡಿದ್ದಾರೆ. ಕೇವಲ ಕೆಲವು ಜನಾಭಿಪ್ರಾಯದಂತೆ ಅವರು ಕೆಲವು ತಪ್ಪುಗಳನ್ನು ಮಾಡಿದ್ದಿರಬಹುದು. ಮತ್ತೆ ಬಹುಜನಾಭಿಪ್ರಾಯದಂತೆ ಅದ್ಭುತ ವಿಜಯಗಳನ್ನೇ ಸಾಧಿಸಿರಬಹುದು. ನಮ್ಮ ಮುಂದಿರುವ ಪ್ರಶ್ನೆ ಅದಲ್ಲ. ಅವರ ಮಹೋನ್ನತ ವ್ಯಕ್ತಿತ್ವ ಸಾಧಿಸಿದ ಘನ ವಿಜಯಗಳು, ಪ್ರತಿ ಒಬ್ಬರೂ ತಪ್ಪದೆ ಒಪ್ಪಿಕೊಳ್ಳಬೇಕಾಗಿದೆ. ಆದುದರಿಂದ ಈ ಸಂದರ್ಭದಲ್ಲಿ ಅವರಿಗೆ ವಂದನೆಗಳನ್ನು ಅರ್ಪಿಸುವುದು ಸಮಂಜಸ.

ಏಕೆಂದರೆ ಈ ಸಂದರ್ಭ ಕೇವಲ ಒಬ್ಬ ಮಹಾನಾಯಕನು ಕಣ್ಣುಮುಚ್ಚಿದ ಸಂದರ್ಭವಲ್ಲ. ಬಹುಶ ಇದು ಒಂದು ವಿಧವಾಗಿ ದೊಡ್ಡ ಬದಲಾವಣೆಗೆ ದಾರಿ. ನನ್ನ ಅಭಿಪ್ರಾಯದ

[6ನೇ ಪುಟ ನೋಡಿ]

ಚೀನದ ಕಮ್ಯುನಿಸ್ಟ್ ನಾಯಕತ್ವದ ತಪ್ಪು ಸಿದ್ಧಾಂತಗಳು

(4ನೇ ಪುಟದಿಂದ)

ಮತ್ತು ಪರಿಷ್ಕರಣವಾದಿ ತಪ್ಪುಗಳಿಂದ ಸೋವಿಯೆತ್ ರಷ್ಯದಲ್ಲಿ ಸಮಾಜವಾದ ಕೊನೆಗೊಂಡು ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿ ತಲೆ ಎತ್ತುತ್ತವೆ ಮತ್ತು 1966 ರಿಂದಾಚೆಗೆ ಇದು ಆಗುತ್ತಲೇ ಇದೆ ಎಂದು ನಂಬುವ ಮೂಲಭೂತ ಅಂಶದ ಮೇಲೆ ಚೀನಿ ನಾಯಕರ ಇಡೀ-ವಾದ ನಿಂತಿದೆ. ಸೋವಿಯೆತ್ ಒಕ್ಕೂಟವನ್ನು ಅಳೆಯಲು ಉಪಯೋಗಿಸುತ್ತಿರುವ ಈ ಅಳತೆಗೋಲಿನಿಂದಲೇ ಚೀನದ ಬೆಳವಣಿಗೆಗಳನ್ನು ಅಳೆಯುತ್ತಾರೆಯೇ ಎಂದು ನಾವು ಈ ಸಿದ್ಧಾಂತಗಳನ್ನು ಎತ್ತಿ ಹಿಡಿಯುವ ಚೀನಿ ನಾಯಕರನ್ನು ಕೇಳುತ್ತೇವೆ.

ಸಮಾಜವಾದಿ ಚೀನದಲ್ಲಿಯೂ ಕೂಡ ಬಂಡವಾಳಶಾಹಿಪಥಗಾಮಿಗಳು ತಲೆ ಎತ್ತಿ, ಕೆಲವು ಕಾಲ ದೇಶದ ಅಧಿಕಾರವನ್ನು ಕೈಗೆ ತೆಗೆದುಕೊಂಡಿದ್ದರು ಮತ್ತು ಲಿನ್‌ಪಿಯಾವೋ, “ದುಷ್ಟ ಚತುಷ್ಟಯ” ದಂಥ ಎಡ ಉಗ್ರತೆಯ ನಾಯಕರು ತಲೆಯೆತ್ತಿ “ದೇಶದ ಅಧಿಕಾರದ ಒಂದಷ್ಟು ಭಾಗವನ್ನು” ಕೈಗೆ ತೆಗೆದುಕೊಂಡಿದ್ದರು, “ಫ್ಯಾಸಿಸ್ಟ್ ಸರ್ವಾಧಿಕಾರವನ್ನು ಹೇರಿದರು” ಮತ್ತು ಹತ್ತು ವರ್ಷಗಳ ಕಾಲ ದಬ್ಬಾಳಿಕೆ ನಡೆಸಿ ಪಕ್ಷದೊಳಗಿನ ಮತ್ತು ಜನತೆಯ ಪ್ರಜಾಪ್ರಭುತ್ವವನ್ನು ಕಿತ್ತುಕೊಂಡಿದ್ದರು ಎಂದು ಚೀನದ ಕಮ್ಯುನಿಸ್ಟ್ ನಾಯಕರೇ ಒಪ್ಪಿಕೊಳ್ಳುತ್ತಾರೆ.

ಇನ್ನೂ ಎಳೆಯದಾಗಿರುವ, ಅಶಕ್ತವಾಗಿರುವ ಮತ್ತು ಎಳೆಸಾಗಿರುವ ಚೀನಿ ಸಮಾಜವಾದವು ಈ ಎಲ್ಲ ತಪ್ಪುದಾರಿಗಳನ್ನು ಮತ್ತು ದೂಷಣೆಗಳನ್ನು ತನ್ನಲ್ಲಿಟ್ಟುಕೊಂಡು ಸಮಾಜವಾದಿಯಾಗಿ ಉಳಿಯಬಹುದಾದರೆ, ಮತ್ತು ತಪ್ಪುಗಳನ್ನು ಸರಿಪಡಿಸಿಕೊಳ್ಳುವ ನಾಲ್ಕು ಆಧುನೀಕರಣಗಳ ಸಾಹಸದಲ್ಲಿ ತೊಡಗಬಹುದಾದರೆ, ಅದಕ್ಕಿಂತ ಬಲಶಾಲಿಯಾಗಿ, ಹಳೆಯದಾಗಿ ಇರುವ ಸೋವಿಯೆತ್ ಸಮಾಜವಾದವು ಸೋವಿಯೆತ್ ಕಮ್ಯುನಿಸ್ಟ್ ನಾಯಕರ ತಪ್ಪುಗಳಿಂದ ಕರಗಿ ಹೋಗುತ್ತಿದೆ ಎಂದು ತೀರ್ಮಾನಿಸುವುದಕ್ಕೆ ಅವರಿಗೆ ಯಾವ ಆಧಾರವಿದೆ?

ಅವರ ಸ್ವವಿಮರ್ಶೆ :

ಫೆಬ್ರುವರಿ 23, 1979ರ ಪೀಕಿಂಗ್ ರೆವ್ಯೂನ ಇತ್ತೀಚಿನ ಬರವಣಿಗೆಗಳಲ್ಲಿರುವ ಅವರ ಸ್ವವಿಮರ್ಶೆಯ ಮಾತುಗಳನ್ನು ಕೆಳಗೆ ಉದಾಹರಿಸುತ್ತೇವೆ :

“1958 ರಿಂದ 1962ರ ವರೆಗೆ ಚೀನದ ಸಮಾಜವಾದಿ ರಚನೆಯು ದೊಡ್ಡ ಸೋಲನ್ನು ಅನುಭವಿಸಿತು. ದೇಶದ ಆರ್ಥಿಕತೆಯು ಅಗಾಧ ವಿಪತ್ತುಗಳನ್ನು ಎದುರಿಸಿತು. ಅನೇಕ ವಸ್ತುನಿಷ್ಠ ಮತ್ತು ವ್ಯಕ್ತಿನಿಷ್ಠ ಕಾರಣಗಳು ಇದಕ್ಕೆ ಇದ್ದರೂ, ಪಕ್ಷದೊಳಗೆ ಮಾಮೂಲಿ ಪ್ರಜಾಸತ್ತಾತ್ಮಕ ಜೀವನ ಇಲ್ಲದ್ದು ಮತ್ತು ಪಕ್ಷದ ಪ್ರಜಾಪ್ರಭುತ್ವವಾದಿ ಕೇಂದ್ರವಾದಕ್ಕೆ ಧಕ್ಕೆ ತಗುಲಿದ್ದು ಮುಖ್ಯ ಕಾರಣವಾಗಿದೆ. ಕೆಲವು ಪ್ರಮುಖ ಕಾರ್ಯಕರ್ತರು ಪಕ್ಷದ ಕಾರ್ಯವಿಧಾನವನ್ನು ಕಡೆಗಣಿಸಿದರು...ಅವರು ತಮಗೆ ಇಷ್ಟಬಂದಂತೆ ಆದೇಶಗಳನ್ನು ನೀಡಿದರು, ಬೇರೆ ಅಭಿಪ್ರಾಯಗಳಿಗೆ ಕಿವಿಗೊಡಲಿಲ್ಲ. ವಿಮರ್ಶೆಯನ್ನು ಮಾಡಲು ಬಿಡುತ್ತಲೇ ಇರಲಿಲ್ಲ. ಚಾರಿತ್ರ್ಯವಧೆಯನ್ನು ಸ್ವತಂತ್ರವಾಗಿ ನಡೆಸಿಕೊಂಡು ಹೋದರು”.

ಲಿನ್‌ಪಿಯಾವೋ ಮತ್ತು ದುಷ್ಟ ಚತುಷ್ಟಯವು “ಬಹುಕಾಲದ ಕಾರ್ಯಕರ್ತರ ಮತ್ತು ಒಳ್ಳೆಯ ಕಾಮ್ರೇಡುಗಳ ತಪ್ಪುಗಳನ್ನು ಅಗಾಧವಾಗಿ ಚಿತ್ರಿಸಿ, ಅವರ ವಿರುದ್ಧ ಆರೋಪಣೆಗಳನ್ನು ಸಿದ್ಧಪಡಿಸಿದರು. ಮುಗ್ಧ ಜನರನ್ನು ಸೆರೆಮನೆಯಲ್ಲಿಟ್ಟು ಮಿಲಿಯಗಟ್ಟಲೆ ಸಂಖ್ಯೆಯ ಅವರ ಕುಟುಂಬ ಮತ್ತು ಬಂಧುಗಳನ್ನು ಈ ನಿರಪರಾಧಿ ಬಲಿಗಳ ಜೊತೆ ತೊಂದರೆಗೆ ಒಳಪಡಿಸಿದರು. ಮಾವೋತ್ಸೆತುಂಗರ ಆಲೋಚನೆ ಮತ್ತು ಮಾವೋ ಮಾತುಗಳ ಬಗ್ಗೆ ಅವರಿಗಿದ್ದ ದೃಷ್ಟಿಕೋನ ಅತಿಕಟ್ಟದಾಗಿತ್ತು. ಅವರು ಎಲ್ಲತರದ ಬಿಗಿ ಕ್ರಮಗಳನ್ನು ನಿಷೇಧಗಳನ್ನು ಸ್ಥಾಪಿಸಿದರು. ಅದರಿಂದ ಪಕ್ಷದ ಒಳಗೆ ಮತ್ತು ಹೊರಗೆ, ಜನತೆಗೆ ಮತ್ತು ಉನ್ನತ ಶ್ರೇಣಿಯ ನಾಯಕರಿಗೆ ಮಾತನಾಡುವುದು ಕೂಡ ಅಸಾಧ್ಯವಾಯಿತು”.

“ಚೀನದ ಕಮ್ಯುನಿಸ್ಟ್ ಪಕ್ಷದಂಥ ಬೃಹತ್ ಪಕ್ಷದೊಳಗೆ ಲಿನ್‌ಪಿಯಾವೋ ಮತ್ತು ದುಷ್ಟಚತುಷ್ಟಯವು ಹತ್ತುವರ್ಷಗಳ ಕಾಲ ಮನಬಂದಂತೆ ನಡೆಯಲು ಹೇಗೆ ಸಾಧ್ಯವಾಯಿತು? ಪಕ್ಷವು ಮಿಲಿಯಗಟ್ಟಲೆ ಸದಸ್ಯರನ್ನು ಹೊಂದಿದೆ. ಕೋಮಿಂಟಾಂಗ್ ಪ್ರತಿಗಾಮಿಗಳು ಮತ್ತು ಸಾಮ್ರಾಜ್ಯಶಾಹಿಗಳ ಜೊತೆ ಹೋರಾಡಬಲ್ಲ ಹಳೇ ಕಾರ್ಯಕರ್ತರ ದೊಡ್ಡಗುಂಪೇ ಇದೆ. ಆದರೆ ಲಿನ್‌ಪಿಯಾವೋ ಮತ್ತು ಗುಂಪಿನಂಥ ಕೈಬೆರಳೆಣಿಕೆಯ ದುಷ್ಟರ ಮುಂದೆ ಇವರೆಲ್ಲ ಹೇಗೆ ಬಲ ಕಳೆದುಕೊಂಡಿದ್ದರು? ಇದಕ್ಕೆ ಒಂದೇ ಒಂದು ಉತ್ತರ ಇದೆ: ಪಕ್ಷದೊಳಗಿನ ರಾಜಕೀಯ ಜೀವನ ಕೆಲವು ವರ್ಷಗಳಿಂದ ಅಸಮಸ್ಥಿತಿಯಲ್ಲಿ ಇತ್ತು. ಪಕ್ಷದೊಳಗೆ ಪ್ರಜಾಪ್ರಭುತ್ವ ಮಾಯವಾಗಿತ್ತು. ಇದರಿಂದ ಇಡೀ ಸಮಾಜದಲ್ಲಿ ಪ್ರಜಾಪ್ರಭುತ್ವ ಗೈರುಹಾಜರಾಗಿತ್ತು. ಆದ್ದರಿಂದ ಇವತ್ತು ಕಲಿಯಬೇಕಾದ ಮೂಲಭೂತ ಪಾಠ ಎಂದರೆ, ಪಕ್ಷದೊಳಗೆ ಸಂಪೂರ್ಣ ಪ್ರಜಾಪ್ರಭುತ್ವ ತುಂಬ ಅಗತ್ಯ ಎಂದು ಕಂಡುಕೊಳ್ಳುವುದು”. (ಪು 18-19)

ಪಕ್ಷದೊಳಗೆ ಮತ್ತು ಇಡೀ ಸಮಾಜದಲ್ಲಿ ಪ್ರಜಾಪ್ರಭುತ್ವ ಅಗತ್ಯವಿದೆ ಎಂಬ ಪಾಠ ಮಾತ್ರವಲ್ಲ, ಇಡೀ ಜಗತ್ತಿನ ಕಮ್ಯುನಿಸ್ಟರು ಕಲಿಯಬೇಕಾದ ಕೆಲವು ಗಂಭೀರ ಮತ್ತು ತುರ್ತಿನ ಪಾಠಗಳು ಬೇರೆ ಸಾಕಷ್ಟಿವೆ.

ವಿಮರ್ಶೆಯ ಬಗ್ಗೆ ಅಸಹನೆ :

ಕೆಲವು ಆಳುವ ಕಮ್ಯುನಿಸ್ಟ್ ಪಕ್ಷಗಳು, ದೊಡ್ಡ ಸಮಾಜವಾದಿ ದೇಶಗಳ ದೊಡ್ಡ ಪಕ್ಷಗಳು, ಸೋದರ ಪಕ್ಷಗಳು ತಮ್ಮ ಬಗ್ಗೆ ಮಾಡುವ ಸೋದರಭಾವದ ವಿಮರ್ಶೆಯನ್ನು ಸಹಿಸಿಕೊಳ್ಳದಿರುವ ರೂಢಿ ಬೆಳೆಸಿಕೊಂಡಿವೆ. ಅವನ್ನು “ಸೋವಿಯೆತ್ ವಿರೋಧಿ” ಎಂದೋ “ಚೀನಾವಿರೋಧಿ” ಎಂದೋ ಆಪಾದಿಸಿಬಿಡುತ್ತವೆ. ಇವುಗಳ ಕೆಲವು ನಾಯಕರು ಹೊಗಳಿಕೆಯ ಮತ್ತು ಮುಖಸ್ತುತಿಯ ರುಚಿಯನ್ನು ಬೆಳೆಸಿಕೊಂಡಿದ್ದಾರೆ. ಅವರೂ ಹೌದಪ್ಪಗಳನ್ನು ಸೃಷ್ಟಿಸಿ, ಇತರ ಪಕ್ಷಗಳೂ ತಮಗೆ ಹೌದಪ್ಪಗಳಾಗಬೇಕೆಂದು ಒತ್ತಾಯಿಸುತ್ತಾರೆ. ಇವೆಲ್ಲವನ್ನೂ ಕಾರ್ಮಿಕ ಅಂತರರಾಷ್ಟ್ರೀಯತೆಯ ನೆವದ ಒಳಗೆ ನಡೆಸುತ್ತಾರೆ.

ಕಾರ್ಮಿಕ ಅಂತರರಾಷ್ಟ್ರೀಯತೆಯಲ್ಲಿ, ಬಂಡವಾಳಶಾಹಿಯ ಮತ್ತು ಸಾಮ್ರಾಜ್ಯಶಾಹಿಯ ವಿರುದ್ಧದ ಹೋರಾಟಕ್ಕೆ ಪರಸ್ಪರ ಬೆಂಬಲ ಮತ್ತು ಭಾವೈಕ್ಯತೆ ಇರಬೇಕೇ ಹೊರತು, ಒಬ್ಬರ ಆಂತರಿಕ ವಿಚಾರಗಳಲ್ಲಿ ಇನ್ನೊಬ್ಬರು ಮಧ್ಯೆ ಪ್ರವೇಶಿಸುವ ನೆವದಲ್ಲಿಯೋ ಅಥವಾ ಪಕ್ಷಗಳ ನಡುವೆ ಪಕ್ಷದ ಮಟ್ಟದಲ್ಲಿ ಮತ್ತು ಕೆಲವೊಮ್ಮೆ ಬಹಿರಂಗವಾಗಿ ನಡೆಯುವ ರಚನಾತ್ಮಕವಾದ, ಸಕಾಲಿಕವಾದ ಮತ್ತು ಪರಸ್ಪರ ಪ್ರಯೋಜನಕಾರಿಯಾದ ವಿಮರ್ಶೆಯು ಸಮಾಜವಾದಿ ಐಕ್ಯತೆ ಮತ್ತು ಸೋದರ ಸಂಬಂಧಗಳನ್ನು ಅಪಾಯಕ್ಕೀಡುಮಾಡುತ್ತದೆಂಬ ಸುಳ್ಳು ಭಯದಿಂದಲೋ, ತಪ್ಪುಗಳನ್ನು ಅಪರಾಧಗಳನ್ನು ಪರಸ್ಪರ ಪ್ರಶಂಶಿಸುವ ಕೆಲಸ ನಡೆಯಬಾರದು.

ಅಂಥ ವಿಮರ್ಶೆಯು, ವಿವಿಧ ಪಕ್ಷಗಳಲ್ಲಿ ನಡೆಯುತ್ತಿರುವ ತಾತ್ವಿಕ ಮತ್ತು ಸೈದ್ಧಾಂತಿಕ ಚರ್ಚೆಗಳ ಮೇಲೆ ಪರಿಣಾಮಕಾರಿ ಪ್ರಭಾವವನ್ನು ಬೀರುತ್ತದೆ. ಅಲ್ಲದೆ, ವಿಮರ್ಶಾರಂಗವನ್ನು ಬೆಳೆಸುತ್ತದೆ, ಪ್ರತಿ ಕಮ್ಯುನಿಸ್ಟ್ ಪಕ್ಷದ ಸ್ವತಂತ್ರ ದೃಢತೆಯನ್ನು ಹೆಚ್ಚಿಸುತ್ತದೆ ಮತ್ತು ಅವರ ಕಾರ್ಮಿಕ ವರ್ಗದ ಲಕ್ಷಾಂತರ ಮಂದಿಯ ಮತ್ತು ಜನತೆಯ ನಡುವೆ ಅವರ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಯೋಗ್ಯತೆಗಳನ್ನು ಸ್ಥಾಪಿಸುತ್ತದೆ.

ಚೀನದ “ಮೂರು ಜಗತ್ತುಗಳ” ಸಿದ್ಧಾಂತದ, “ಸೋವಿಯೆತ್ ರಷ್ಯವು ಶಾಂತಿಯ ಮತ್ತು ಸಮಾಜವಾದದ ಮುಖ್ಯ ಶತ್ರು” ಎಂಬ ಹೇಳಿಕೆಗಳ ಸದ್ಯದ ಚೀನಿ ಕಮ್ಯುನಿಸ್ಟ್ ಪಕ್ಷದ ನಮ್ಮ ವಿಮರ್ಶೆಗೂ ಚೀನದ ಸಮಾಜವಾದವು “ಮಿಲಿಟರಿ ಆಡಳಿತಕ್ಕೆ ಮತ್ತು ಫ್ಯಾಸಿಸಂಗೆ” ಬಲಿಯಾಗಿದೆ ಎಂದು ಕೆಲವರು ಅದನ್ನು ಒತ್ತರಿಸುವುದಕ್ಕೂ ಯಾವ ಸಂಬಂಧವೂ ಇಲ್ಲ. ವಿಶ್ವ ಕಮ್ಯುನಿಸ್ಟ್ ಚಳುವಳಿಯಲ್ಲಿ ಇರುವ ಬಲ ಮತ್ತು ಎಡ ಪರಿಷ್ಕರಣವಾದಿ ಅಡ್ಡಮಾರ್ಗಗಳು ಆದಷ್ಟು ಶೀಘ್ರವಾಗಿ ಸರಿಹೋಗಬೇಕು ಮತ್ತು ಸಮಕಾಲೀನ ಜಗತ್ತಿನ ವಾಸ್ತವಗಳಿಗೆ ಅನುಗುಣವಾದ ಒಂದು ನೀತಿಯ ಆಧಾರದ ಮೇಲೆ ಮತ್ತು ಒಂದು ಹೊಸ ಔನ್ನತ್ಯದಲ್ಲಿ ವಿಶ್ವ ಕಮ್ಯುನಿಸ್ಟ್ ಐಕ್ಯತೆಯು ಪುನರ್‌ಸ್ಥಾಪನೆಯಾಗಬೇಕು ಎಂದು ಶುದ್ಧಮನಸ್ಸಿನಿಂದ ಆಶಿಸುವ ಮಾರ್ಕ್ಸ್‌ವಾದಿ-ಲೆನಿನ್‌ವಾದಿಗಳ ಮತ್ತು ಕಾರ್ಮಿಕ ಅಂತರರಾಷ್ಟ್ರೀಯತಾವಾದಿಗಳ ಗುಂಪಿಗೆ ನಮ್ಮ ಪಕ್ಷ ಸೇರಿದೆ.

ಕೇರಳ ಪತ್ರ:

ಕೇರಳ ರಾಜ್ಯ ರೈತಸಂಘದ 15ನೇ ಸಮ್ಮೇಳನ - ವ್ಯಾಪಕ ಹೋರಾಟಕ್ಕೆ ಕರೆ

ಕೇರಳ ರಾಜ್ಯ ರೈತಸಂಘದ 15ನೇ ಸಮ್ಮೇಳನವು ಇಡುಕ್ಕಿ ಜಿಲ್ಲೆಯ "ತೋಡುಪ್ರಯು"ದಲ್ಲಿ ಮಾರ್ಚಿ 9, 10 ಮತ್ತು 11ರಂದು ಜರುಗಿತ್ತು. ದೇಶದಲ್ಲಿ ಭೂಮಾಲಕ ಪದ್ಧತಿಯ ನೊಗದಿಂದ ರೈತರನ್ನು ವಿಮೋಚಿಸಿ, ಪ್ರಪ್ರಥಮವಾಗಿ ಭೂಮಸೂದೆಯನ್ನು ಜಾರಿಗೊಳಿಸಲು ಚಾರಿತ್ರಿಕ ಹೋರಾಟ ನಡೆಸಿ ಯಶಸ್ವಿಯಾದ ರೈತ ಸಂಘ "ಕೇರಳ ಕರ್ಷಕ ಸಂಘ".

ಮಲಬಾರ್ ಕೃಷಿಕರ ಚಳುವಳಿಯನ್ನು ಹಾಗೂ ತಿರುಕೊಟ್ಟ ಸಂಸ್ಥಾನದ ರೈತ ಚಳುವಳಿಯನ್ನು ಒಗ್ಗೂಡಿಸಿ 1956ರಲ್ಲಿ "ಕೇರಳ ಕರ್ಷಕಸಂಘ"ವನ್ನು ಪ್ರಾರಂಭಿಸಲಾಯಿತು.

ಜಮೀನ್ದಾರಿ ಪದ್ಧತಿಯ ಆರ್ಥಿಕ ಶೋಷಣೆ, ಅದರ ಗುಲಾಮ ಸಂಸ್ಕೃತಿ ಹಾಗೂ ಕೋಮುವಾದದ ವಿರುದ್ಧ ಹೋರಾಡಿದ ಸಂಘ, ಕೈಯೂರು, ಕರಿವೆಳ್ಳುರು, ಪುನಪ್ರ–ವಯಲಾರ್, ಕಾಪ್ರಂಬಾಯಿ, ವೊಂಜಿಯಂ ಮೊದಲಾದ ಕಡೆಗಳಲ್ಲಿ ನಡೆಸಿದ ಐತಿಹಾಸಿಕ ಹೋರಾಟದಿಂದ ಹಾಗೂ ಅಸಂಖ್ಯಾತ ಕ್ರಾಂತಿಕಾರಿ ಸಂಗಾತಿಗಳ ತ್ಯಾಗ, ಬಲಿದಾನಗಳಿಂದ ಕೇರಳದ ಏಕೈಕ ಶಕ್ತಿಯುತ ರೈತ ಸಂಘಟನೆಯಾಗಿ ಬೆಳೆದಿದೆ. 1977-78ರಲ್ಲಿ ಸಂಘದ ಸದಸ್ಯತ್ವ 2,53,312 ಆಗಿದ್ದು, ರಾಜ್ಯದ ಬೃಹತ್ ರೈತಸಂಘವಾಗಿದೆ.

ಬೆಳೆಯುತ್ತಿರುವ ಕೃಷಿಕರ ಸಮಸ್ಯೆಗಳು:

ಭತ್ತ, ಮರಗೆಣಸು, ಶುಂಠಿ ಮುಂತಾದ ಕೃಷಿ ಉತ್ಪನ್ನಗಳನ್ನು ಬೆಳೆಯುವ ರೈತರ ಅಸಂಖ್ಯಾತ ಸಮಸ್ಯೆಗಳನ್ನು ಬಗೆಹರಿಸದಿದ್ದರೆ, ಕೇರಳದ ಕೃಷಿರಂಗವೇ ಕುಸಿಯುವುದೆಂದು ಸಮ್ಮೇಳನ ಸರಕಾರಕ್ಕೆ ಎಚ್ಚರಿಕೆಯನ್ನು ಕೊಟ್ಟಿದೆ. ಅಕ್ಕಿಗಾಗಿ ನೆರೆಯ ರಾಜ್ಯಗಳನ್ನು ಹಾಗೂ ಕೇಂದ್ರವನ್ನು ಅವಲಂಬಿಸುವ ಪರಿಸ್ಥಿತಿ ರಾಜ್ಯಕ್ಕೆ ಬಂದಿದೆ. ಇದಕ್ಕೆ ಕಾರಣ, ಭತ್ತ ಬೆಳೆಯುವ ರೈತರಿಗೆ ತಮ್ಮ ಫಸಲುಗಳಿಗೆ ಸರಿಯಾದ ಬೆಲೆ ಸಿಗದಿರುವುದೇ ಕಾರಣ. ಭತ್ತದ ಬೆಳೆಗಾಗಿ ಮಾಡಿದ ಸಾಲದ ಮರುಪಾವತಿ ಹಾಗೂ ಬಡ್ಡಿಯನ್ನು ತೆರಲು ಅಸಮರ್ಥವಾಗಿರುವ ರೈತರು ಅನಿವಾರ್ಯವಾಗಿ ಲಾಭದಾಯಕ ಕೃಷಿಯಾದ ತೆಂಗು ಮುಂತಾದ ಬೆಳೆಗಳನ್ನು ಬೆಳೆಯುತ್ತಿದ್ದಾರೆ, ಕೆಲವು ಕಡೆ ಭೂಮಿಯನ್ನು ಹಾಗೆಯೇ ಪಾಳುಬಿಟ್ಟಿದ್ದಾರೆ.

ಭತ್ತಕ್ಕೆ ಸರಕಾರ ಬೆಲೆಯನ್ನು ನಿಶ್ಚಯಿಸಿದ್ದರೂ (Supporting price) ಕೃಷಿಕರಿಂದ ಭತ್ತ ಸಂಗ್ರಹಣೆ ಮಾಡುವ ಕಾರ್ಯದಲ್ಲಿ ಸರಕಾರ ಪರಾಜಯಹೊಂದಿದೆ. ಏಕೆಂದರೆ, ಬೆಲೆ ನಿಶ್ಚಯ ನೀತಿ 10,000 ಟನ್ನುಗಳಿಗಿಂತಲೂ ಹೆಚ್ಚು ಭತ್ತ ಉತ್ಪಾದಿಸುವ ತಾಲ್ಲೂಕುಗಳಿಗೆ ಮಾತ್ರ ಅನ್ವಯಿಸುತ್ತದೆ.

ಕೃಷಿನೀತಿ:

ಕೃಷಿಗೆ ಮುಖ್ಯವಾದ ನೀರಾವರಿ ಸೌಲಭ್ಯವನ್ನು ಒದಗಿಸುವುದರಲ್ಲಿಯೂ ಸರಕಾರ ಆಲಸ್ಯದ ಧೋರಣೆ ತಳೆದಿದೆ. 1956ರಲ್ಲಿ ಪ್ರಾರಂಭವಾದ ಪೆರಿಯಾರ್ ವ್ಯಾಲಿ ಯೋಜನೆ, 1961ರ ಕಲ್ಲಡ ಯೋಜನೆ, 1962ರ ಕುಟ್ಯಾಡಿಯಾ, 1963ರ ಚಿತ್ತೂರು ನದಿ ಯೋಜನೆ ಮುಂತಾದ ಯಾವ ಯೋಜನೆಗಳೂ ಪೂರ್ತಿಯಾಗಿಲ್ಲ. ಹೊಸದಾಗಿ ರೂಪಿಸಲಾಗಿರುವ ಯೋಜನೆಗಳ ಗತಿಯೂ ಇದೇ ರೀತಿಯಾಗಿರುವುದರಿಂದ, ರೈತರಿಗೆ ಈ ಯೋಜನೆಗಳಿಂದ ಯಾವ ಪ್ರಯೋಜನವೂ ಇಲ್ಲದಂತಾಗಿದೆ.

ಭೂಮಸೂದೆ ಜಾರಿಯಾಗಿ ಒಂಭತ್ತು ವರ್ಷಗಳಾದರೂ ಮಸೂದೆಯ ಸಮಗ್ರ ಉಪಯೋಗ, ಜನಸಾಮಾನ್ಯರಿಗೆ ತಲುಪಿಸುವುದರಲ್ಲಿ ಕೇರಳ ಸರಕಾರ ವಿಫಲವಾಗಿದೆ. ತದ್ವಿರುದ್ಧವಾಗಿ ತಾನೇ ರಚಿಸಿದ ಶಾಸನದಲ್ಲಿ ಸುರಂಗಕೊರೆದು, ಮಿಗತೆ ಭೂಮಿಯನ್ನು ಭೂರಹಿತ ಕೃಷಿ ಮಜೂರರಿಗೆ ಕೊಡುವ ಬದಲು 'ಇಷ್ಟದಾನ' ನಿಯಮದ ಮೂಲಕ ಭೂಮಿಯನ್ನು ಪರಭಾರೆ ಮಾಡಲು ಅಥವಾ ಕೈ ಬದಲಾಯಿಸಲು ಸರಕಾರ ಅವಕಾಶ ಮಾಡಿಕೊಟ್ಟಿದೆ.

ಕಾಡುಗಳಲ್ಲಿ ವಾಸಿಸುವ ಹರಿಜನ, ಗಿರಿಜನರಿಗೆ ಇದುವರೆಗೂ ಸರಕಾರ ಪಟ್ಟಾ ಕೊಟ್ಟಿಲ್ಲ, ಬದಲು ನೂರಕ್ಕೂ ಹೆಚ್ಚು ಹರಿಜನರನ್ನು ಕೊಟ್ಟಾಯಂ ಜಿಲ್ಲೆಯ 'ಪೋಂದನ್‌ಪ್ರಯಿ'ಯಿಂದ ಓಡಿಸಿದೆ. ಇಡುಕ್ಕಿ ಜಿಲ್ಲೆಯ ಮಾಂಕುಳಂ ಮುಂತಾದ ಸ್ಥಳಗಳಿಂದ ಒಕ್ಕಲೆಬ್ಬಿಸಲ್ಪಟ್ಟ ಕೃಷಿಕರು ನಿರ್ಗತಿಕರಾಗಿ ಬೀದಿಪಾಲಾಗಿದ್ದಾರೆ. ಬ್ಯಾಂಕ್ ಮತ್ತು ಸಹಕಾರಿ ಸಂಘಗಳಿಂದ ಪಡೆದ ಸಾಲದ ವಸೂಲಿಗಾಗಿ ನಡೆದ ಜಪ್ತಿ, ಹರಾಜು ಮುಂತಾದ ಕ್ರಮಗಳಿಗೆ ಒಳಗಾದ 65,000 ಪ್ರಕರಣಗಳು ಈಗಾಗಲೇ ದಾಖಲೆ ಮಾಡಲಾಗಿದೆ. ಭೂಮಸೂದೆಯಲ್ಲಿ 25 ಲಕ್ಷ ಗೇಣಿದಾರರ ಗೇಣಿಬಾಕಿಯನ್ನು ವಜಾಮಾಡಲು ಅವಕಾಶಗಳಿದ್ದರೂ ಕೇರಳದ ಜನದ್ರೋಹಿ ಸರಕಾರ ಅದಕ್ಕೆ ತಯಾರಿಲ್ಲ. ಸರಕಾರಕ್ಕೂ ಭೂಮಾಲೀಕರಿಗೂ ಯಾವ ವ್ಯತ್ಯಾಸವೂ ಇಲ್ಲ.

ರಬ್ಬರ್, ತೆಂಗಿನಕಾಯಿ ಮೊದಲಾದ ಕೇರಳದ ಉತ್ಪನ್ನಗಳಿಗೆ ಸರಿಯಾದ ಬೆಲೆಯಿಲ್ಲದಿರುವಾಗ, ಇವುಗಳನ್ನು ಆಮದು ಮಾಡಿಕೊಳ್ಳಲು ಕೇಂದ್ರ ಸರಕಾರ ಹಿರೇ ಬಂಡವಾಳಶಾಹಿಗಳಿಗೆ ಅನುಮತಿ ಕೊಟ್ಟಿರುವುದರಿಂದ ಕೃಷಿಕರು ಕಂಗೆಟ್ಟಿದ್ದಾರೆ. ಕೇಂದ್ರದ ಕೇರಂಬೋರ್ಡ್ ಆಗಿರುವ "ರಳ ವಿಕಸನ ಕಾರ್ಪೋರೇಷನ್"ನಲ್ಲಿ ಕೃಷಿಕರಿಗೆ ಪ್ರಾತಿನಿಧ್ಯವೇ ಇಲ್ಲ.

ರೈತಸಂಘದ ಹೋರಾಟ:

1978ರ ಮೇ ತಿಂಗಳಲ್ಲಿ ಪಾಲಘಾಟ್‌ನಲ್ಲಿ ಜರುಗಿದ ರೈತಸಮ್ಮೇಳನದ ತೀರ್ಮಾನದಂತೆ, ಅರಣ್ಯಪ್ರದೇಶದ ಕೃಷಿಕರನ್ನು ಒಕ್ಕಲೆಬ್ಬಿಸುವುದರ ವಿರುದ್ಧವಾಗಿ, ರೈತರ ಸ್ವಾಧೀನವಿರುವ ಜಮೀನಿಗೆ ಪಟ್ಟಾ ವಿತರಣೆಗಾಗಿ, ರಬ್ಬರ್, ತೆಂಗಿನಕಾಯಿ, ಮರಗೆಣಸು, ಭತ್ತ, ಗೇರುಬೀಜ ಮುಂತಾದವುಗಳಿಗೆ ಸರಿಯಾದ ಬೆಲೆ ನಿಗದಿಗಾಗಿ, ಸಾಲ, ಅಧಿಕ ಬಡ್ಡಿ, ಗೇಣಿಬಾಕಿ ಕೇಸುಗಳ ವಿರುದ್ಧವಾಗಿ ಹಾಗೂ ಏರಿಸಿದ ಕೃಷಿ ತೆರಿಗೆಗಳ ವಿರುದ್ಧ ಹೋರಾಡಲಾಯಿತು.

7 ಬೇಡಿಕೆಗಳನ್ನು ಮುಂದಿಟ್ಟು 1978 ಜುಲೈ 29ರಂದು ಮಂಜೇಶ್ವರದಿಂದ ಪ್ರಾರಂಭವಾದ ಜಾಪುಜಾಥಾ ಆಗಸ್ಟ್ 18ರಂದು ತಿರುವನಂತಪುರವನ್ನು ತಲುಪಿತು. ಆಗಸ್ಟ್ 21ರಿಂದ 31ರವರೆಗೆ ನಡೆಸಿದ ಪಿಕೆಟಿಂಗ್‌ನಲ್ಲಿ

[8ನೇ ಪುಟ ನೋಡಿ]

ಯುಗ ಪುರುಷ ಸ್ಟಾಲಿನ್

(5ನೇ ಪುಟದಿಂದ)

ಪ್ರಕಾರ ಇಂದು ಚರಿತ್ರೆಯಲ್ಲಿ ಒಂದು ಯುಗದ ಮೇಲೆ ಪರದೆ ಬೀಳುತ್ತಿರುವ ಸಮಯವಾಗಿದೆ. ಪ್ರಜೆಗಳ ಆಲೋಚನೆಯ ಮೇಲೆ, ಅಂತರಂಗಗಳ ಮೇಲೆ, ಅವರಿಗಿರುವ ಪ್ರಭಾವ, ಹಿಡಿತ, ಅವರನ್ನು ಕುರಿತ ಸ್ಮರಣೆ, ಇವೆಲ್ಲಾ ಮಾರ್ಷಲ್ ಸ್ಟಾಲಿನ್ ಕಣ್ಣುಮುಚ್ಚಿದ ಪ್ರಕ್ಕೆ, ಜನತೆಯ ಮೇಲೆ ಪ್ರಭಾವ ಬೀರಬಹುದೆಂಬ ಸಂದೇಹಕ್ಕೆ ಎಡೆಯೇ ಇಲ್ಲ.

ನನ್ನ ಲೆಕ್ಕಾಚಾರದ ಪ್ರಕಾರ ನೋಡಿದಾಗ ಸ್ಟಾಲಿನರು ಸೋವಿಯೆತ್ ದೇಶಕ್ಕೆ ಮಾತ್ರ ಮಹಾನಾಯಕರಾಗಿ ಸೀಮಿತವಾಗಿಲ್ಲ. ಬದಲಾಗಿ ಒಂದು ದೇಶದ ಮಹಾನಾಯಕನಿಗಿಂತ ಎಷ್ಟೋ ಉನ್ನತ ಸ್ಥಾನಕ್ಕೆ ಸೇರಿಸತಕ್ಕವರು. ಅವರ ಇಡೀ ಪರಿಶ್ರಮ ಶಾಂತಿಗಾಗಿ ಮುಡಿಪಾಗಿತ್ತು ಎಂದು ನಾನು ಹೇಳಬಲ್ಲೆ. ಯಾವಾಗ ಯುದ್ಧದ ಪ್ರಭಾವ ಪ್ರಜ್ವಲಿಸಿದೆಯೋ ಆಗ ತಾನು ಸಹ ಒಬ್ಬ ಯುದ್ಧ [ಸಮರ] ಪ್ರೇಮಿ ಎಂಬುದನ್ನು ರುಜುವಾತು ಮಾಡಿದ್ದಾರೆ. ಆದರೆ ನಮಗೆ ಗೊತ್ತಾಗಿರುವ ವಿಷಯಗಳನ್ನು ಪರಿಶೀಲಿಸಿದಾಗ ಅವರ ಮನಸ್ಸು ಸದಾಕಾಲ ಶಾಂತಿಗಾಗಿ ಪರಿತಪಿಸುತ್ತಿರುವಂತೆ ಕಾಣುತ್ತಿತ್ತು. ಹಾಗೂ ನಮಗೆ ಶಾಂತಿಪ್ರಿಯನಾಗಿ, ಯುದ್ಧಪ್ರಿಯನಾಗಿ ಗೋಚರಿಸುತ್ತಾನೆ ಸ್ಟಾಲಿನ್. ನಿಜ ಹೇಳಬೇಕಾದರೆ ಮೂರು ವಾರಗಳ ಹಿಂದೆ ನಮ್ಮ ರಾಯಭಾರಿ ಮಾರ್ಷಲ್ ಸ್ಟಾಲಿನ್‌ರನ್ನು ಭೇಟಿಯಾದಾಗ, ತಾನು "ಶಾಂತಿ ಕಾಮುಕನೆಂದು" ಸ್ವತಃ ಅವರೇ ಹೇಳಿದ್ದಾರೆ. ಪ್ರಪಂಚದ ಶಾಂತಿಗೆ ಎಂತಹ ಸಮಯದಲ್ಲೇ ಆಗಲಿ ಭಂಗ ಬರಬಾರದೆಂಬ ಆಶಾಭಾವನೆಯನ್ನು ವ್ಯಕ್ತಪಡಿಸಿದ್ದಾರೆ.

ಭಾರತದ ಮೇಲೆ ತನಗಿರುವ ಸದ್ಭಾವನೆಯನ್ನು ಪ್ರಕಟಿಸಿ, ನಮ್ಮಲ್ಲಿ ಕೆಲವರಿಗೆ ಶುಭ ಸಂದೇಶಗಳನ್ನು ಕಳುಹಿಸಿದ್ದಾರೆ. ನಮ್ಮ ಸಾಂಸ್ಕೃತಿಕ ಸಮಸ್ಯೆಗಳನ್ನು ಕುರಿತು ಅವರು ನಮ್ಮ ರಾಯಭಾರಿಯೊಟ್ಟಿಗೆ ಚರ್ಚಿಸಿದ ವಿಷಯಗಳು ಎಷ್ಟೋ ಆಸಕ್ತಿದಾಯಕವಾದದ್ದು, ಮತ್ತು ಸಂತೋಷದಾಯಕವಾದದ್ದು. ಭಾರತದ ಭಾಷೆಗಳು, ಅವುಗಳ ನಡುವೆ ಇರುವ ಪರಸ್ಪರ ಸಂಬಂಧ, ಮುಂತಾದ ಅನೇಕ ವಿಷಯಗಳ ಬಗ್ಗೆ ಚರ್ಚೆನಡೆದದ್ದನ್ನು ನಮ್ಮ ರಾಯಭಾರಿ ನಮ್ಮ ಮುಂದೆ ಹೇಳಿದ್ದಾರೆ. ಈ ಸಂದರ್ಭದಲ್ಲಿ ಅವರ ಪರಿಶ್ರಮ ಮತ್ತಷ್ಟು ಪ್ರಪಂಚದ ಶಾಂತಿಗೆ ದಾರಿಯಾಗಬಹುದೆಂದು ಆಶಿಸೋಣ". ●

ಚಂದಾ ವಿವರ

ಒಂದು ವರ್ಷಕ್ಕೆ	ರೂ. 20-00
ಅರ್ಧ ವರ್ಷಕ್ಕೆ	ರೂ. 10-00
ಬಿಡಿ ಪ್ರತಿ	ರೂ. 0-40

ಏಜೆನ್ಸಿ ಮತ್ತು ಚಂದಾದಾರರ ಅವಗಾಹನೆಗೆ

ಪ್ರತಿ ತಿಂಗಳ 15ನೇ ತಾರೀಖಿನ ಒಳಗಡೆ ಏಜೆನ್ಸಿ ಬಿಲ್ಲಿನ ಹಣ ಪಾವತಿಯಾಗದಿದ್ದಲ್ಲಿ ಏಜೆನ್ಸಿಯನ್ನು ರದ್ದುಗೊಳಿಸಬೇಕಾಗುತ್ತದೆ. ಚಂದಾದಾರರು ಮತ್ತು ಏಜೆಂಟರುಗಳು ಹಣವನ್ನು ಕಳುಹಿಸುವಾಗ ಮನಿಆರ್ಡರ್, ಬ್ಯಾಂಕ್ ಡ್ರಾಫ್ಟ್ ಅಥವಾ ಚೆಕ್ಕುಗಳ ಮೂಲಕ ಕಳುಹಿಸಬಹುದು. ಬ್ಯಾಂಕ್ ಡ್ರಾಫ್ಟ್ ಅಥವಾ ಚೆಕ್ಕನ್ನು "ಐಕ್ಯರಂಗ" ಹೆಸರಿಗೆ (ಐಕ್ಯರಂಗ ವೀಕ್ಲಿ ಎಂದು ಬರೆಯಬಾರದು) ಕಳುಹಿಸಬೇಕು.

ಸಂಪಾದಕ
ಮತ್ತು
ವ್ಯವಸ್ಥಾಪಕ.

ರಿಕ್ಷಾ ಚಾಲಕರ ಬೇಡಿಕೆ

ಕೇಂದ್ರ ಮತ್ತು ರಾಜ್ಯದ ಹೊಸ ಬಜೆಟ್ಟಿನಿಂದ ಪೆಟ್ರೋಲು, ಎಣ್ಣೆ, ಬಿಡಿ ಭಾಗಗಳ ಕ್ರಯ ಏರಿದರೂ, ಆಟೋ ರಿಕ್ಷಾಗಳ ಕನಿಷ್ಠದರ ಹಾಗೂ ರನ್ನಿಂಗ್ ದರವನ್ನು ಪರಿಷ್ಕೃತ ಮಾಡದೆ, ಮೀಟರ್ ಕಡ್ಡಾಯ ಹಾಕಬೇಕೆಂದು ಸಾರಿಗೆ ಅಧಿಕಾರಿಗಳು ಪತ್ರಿಕೆಗಳಲ್ಲೂ, ಆಕಾಶವಾಣಿಯಲ್ಲೂ ಸಾರಿದುದನ್ನು ಕಂಡು ಮಂಗಳೂರಿನ ರಿಕ್ಷಾ ಚಾಲಕರು ಮತ್ತು ಮಾಲೀಕರು 3-4-79ರಂದು ಕಾಂ. ಕೊರಗಪ್ಪ ರೈ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿದರು.

ಈ ಸಭೆಯಲ್ಲಿ 700ಕ್ಕೂ ಹೆಚ್ಚು ರಿಕ್ಷಾಚಾಲಕರು ಹಾಗೂ ಮಾಲೀಕರು ಭಾಗವಹಿಸಿದ್ದರು. ದ. ಕ. ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಸಾರಿಗೆ ಮಂತ್ರಿಯವರಿಗೆ ಮನವಿ ಸಲ್ಲಿಸಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು. ದ. ಕ. ಜಿಲ್ಲೆಯ ಸಾರಿಗೆ ಅಧಿಕಾರಿಗಳಿಗೂ ಮನವಿ ಸಲ್ಲಿಸಬೇಕೆಂದು, ರಿಕ್ಷಾಚಾಲಕ ಮತ್ತು ಮಾಲೀಕರ ದುಃಸ್ಥಿತಿಯ ಬಗ್ಗೆ ಕರಪತ್ರ ಹಂಚಬೇಕೆಂದು, ಮತ್ತು ರಿಕ್ಷಾಚಾಲಕರ ಮತ್ತು ಮಾಲೀಕರ ಸಂಘಟನೆಯನ್ನು ಬಲವಾಗಿ ಕಟ್ಟಬೇಕೆಂದು ತೀರ್ಮಾನ ಕೈಗೊಳ್ಳಲಾಯಿತು.

○

ರಾಜ್ಯ ರೈತ ಸಮ್ಮೇಳನಕ್ಕೆ ತಯಾರಿ

ಬೆಳ್ತಂಗಡಿಯಲ್ಲಿ :

ಬೆಳ್ತಂಗಡಿ ತಾಲ್ಲೂಕು ರೈತಸಂಘದ ಸಭೆಯು ಕಾಂ. ಚಿನ್ನಪ್ಪ ಪೂಜಾರಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ಕಾಂ. ಕೆ. ವಿ. ರಾಯರು ಸಭೆಯ ಉದ್ದೇಶವನ್ನು ವಿವರಿಸುತ್ತಾ ಬರುವ ಮೇ ತಿಂಗಳಲ್ಲಿ ಮಂಗಳೂರಲ್ಲಿ ಜರಗುವ ಕರ್ನಾಟಕರಾಜ್ಯ ರೈತ ಸಮ್ಮೇಳನವು ರಾಜ್ಯದ ರೈತರ ಹೋರಾಟದ ದಾರಿಯ ಮೈಲುಗಲ್ಲಿನಂತಿದೆಯೆಂದೂ, ಜಾರಿಯಾಗಿರುವ ಭೂಸುಧಾರಣೆಯಲ್ಲಿರುವ ಅನೇಕ ಲೋಪದೋಷಗಳನ್ನು ಸರಿಪಡಿಸಲು, ಭೂಮಿಗಾಗಿ ನಮ್ಮ ಹೋರಾಟವನ್ನು ಮುಂದುವರಿಸಲು ಅದು ಸಹಾಯವಾಗುವುದೆಂದೂ ಅದಕ್ಕಾಗಿ ರೈತ, ಶ್ರಮಿಕರು ತಮ್ಮ ಕೈಲಾದ ನೆರವು ನೀಡಬೇಕೆಂದೂ ಕೇಳಿಕೊಂಡರು. ಸಭೆಗೆ ಆಗಮಿಸಿದ್ದ ದ. ಕ. ಜಿಲ್ಲಾ ರೈತಸಂಘದ ಕಾರ್ಯದರ್ಶಿ ಕಾಂ. ಜನಾರ್ದನ ನಾಯಕರು ವಾರಣಾಸಿಯಲ್ಲಿ ಜರಗಿದ ಅಖಿಲ ಭಾರತ ಕಿಸಾನ್ ಸಮ್ಮೇಳನದ ಬಗೆಯನ್ನು ವಿವರಿಸುತ್ತಾ ರಾಜ್ಯಸಮ್ಮೇಳನವು ಅಲ್ಲಿನ ನಿರ್ಣಯಗಳನ್ನು ಕಾರ್ಯರೂಪದಲ್ಲಿ ತರಲು ಸಹಾಯಕವಾಗುವುದೆಂದೂ, ರೈತ ಶ್ರಮಿಕರ ಹೋರಾಟದಿಂದಲೇ ನಮಗೆ ನಮ್ಮ ಆಶಯಗಳನ್ನು ಈಡೇರಿಸಲು ಸಾಧ್ಯವಾಗುವುದೆಂದೂ ಹೇಳಿದರು. ಕಾಂ. ಅಬ್ರಹಾಂಕರ್ಕಡರು ಮೇ ತಿಂಗಳಲ್ಲಿ ಸೇರಲಿರುವ ರಾಜ್ಯಸಮ್ಮೇಳನವು ರಾಜ್ಯದ ರೈತಕಾರ್ಮಿಕ ಶಕ್ತಿಯ ಪ್ರತೀಕವಾಗಲು ಪ್ರತಿಯೊಬ್ಬನೂ ಶ್ರಮಿಸುವುದು ಅಗತ್ಯವಾಗಿದೆ ಎಂದು ನುಡಿದರು. ಮುಂಬರಲಿರುವ ರಾಜ್ಯ ರೈತಸಮ್ಮೇಳನದ ಸಿದ್ಧತೆಗಾಗಿ ತಾ. 20 ರಿಂದ 30 ರವರೆಗೆ ತಾಲ್ಲೂಕಿನಲ್ಲಿ ಕಾಂ. ಕೆ. ವಿ. ರಾಯರ ನೇತೃತ್ವದಲ್ಲಿ ತಾಲ್ಲೂಕು ಸಂಘದ ಜಾಥಾವು ಪಾದಯಾತ್ರೆ ನಡೆಸಲೂ ಸ್ವಯಂಸೇವಕರನ್ನೂ, ಸಹಾಯಸಂಗ್ರಹವನ್ನೂ ಮಾಡಲು ನಿರ್ಣಯಿಸಿತು.

ಪುತ್ತೂರಿನಲ್ಲಿ :

ದ. ಕ. ಜಿಲ್ಲೆಯ ಪುತ್ತೂರು ತಾಲ್ಲೂಕು ರೈತ ಸಂಘದ ಸಮಿತಿಯ ಸಭೆಯು ತಾ. 7-4-79 ರಂದು ಪುತ್ತೂರು ಆಫೀಸಿನಲ್ಲಿ ಕಾಂ. ಕೆ. ಸೂರ್ಯನಾರಾಯಣಭಟ್‌ರವರ ಅಧ್ಯಕ್ಷತೆಯಲ್ಲಿ ಸೇರಿತ್ತು.

ನಂತರ ತಾಲ್ಲೂಕು ರೈತಸಂಘದ ಕಾರ್ಯದರ್ಶಿ ಕಾಂ. ಬಿ. ವಿಷ್ಣುಮೂರ್ತಿಯವರು ತಾಲ್ಲೂಕಿನ ಸದಸ್ಯತ್ವದ ಬಗ್ಗೆ ವರದಿ ನೀಡಿದರು. ರೈತರು ತಮ್ಮ ಸಮಸ್ಯೆಗಳ ಪರಿಹಾರಕ್ಕೆ ಸಂಘಟಿತ ಹೋರಾಟ ನಡೆಸಬೇಕು ಎಂದು ಹೇಳಿದರು. ರಾಜ್ಯದ ವಿವಿಧ ಜಿಲ್ಲೆಗಳ ರೈತರ ಸಮಸ್ಯೆಗಳ ಅಭ್ಯಾಸ ನಡೆಸಿ ರಾಜ್ಯದಾದ್ಯಂತ ರೈತರ ಸಂಘಟನೆ ಬೆಳೆಸಲು ಸಾಧ್ಯವಾಗುವಂತೆ ಈ ಬಾರಿಯ ಸಮ್ಮೇಳನವನ್ನು ಯೋಜಿಸಲು ಹೆಚ್ಚಿನ ಗ್ರಾಮಗಳಲ್ಲಿ ಪ್ರಚಾರ ನಡೆಸಿ, ನಿಧಿ ಸಂಗ್ರಹ ಮತ್ತಿತರ ಕಾರ್ಯಕ್ರಮಗಳನ್ನು ನಡೆಸಲು ಸಭೆ ತೀರ್ಮಾನಿಸಿತು.

ಸುಳ್ಯ ತಾಲ್ಲೂಕು ರೈತಸಂಘದ ಅಧ್ಯಕ್ಷರಾದ ಕಾಂ. ಎಂ. ಕೆ. ಭಟ್ ಅವರು ರೈತರು ಸಂಘಟಿತರಾಗಿ, ತಮ್ಮ ನ್ಯಾಯಯುತ ಕೇಳಿಕೆಗಳನ್ನು ಪಡೆಯಬೇಕಾದರೆ ದುಡಿಯುವ ವರ್ಗದ ಹಿತಾಸಕ್ತಿಯನ್ನು ಕಾಪಾಡುವ ಸರ್ಕಾರ ಬರಬೇಕಾಗಿದೆ. ಆದ್ದರಿಂದ ಹೋರಾಟ ಮುಂದುವರೆಯಲಿ ' ಎಂದು ಕರೆಯಿತ್ತರು. ●

ಶುಭ ವಿವಾಹ

29-4-79ನೇ ಭಾನುವಾರ, ತಂದೋಳಿಗೆ ಚಂದು ಮಣಿಯಾಣಿಯವರ ಪುತ್ರ ಜಯರಾಮ ಮತ್ತು ಸುಳ್ಯ ತಾಲ್ಲೂಕು ಆಲೆಟ್ಟಿ ಬಾಲಕೃಷ್ಣ ಮಣಿಯಾಣಿಯವರ ಪುತ್ರಿ ಲೀಲಾವತಿ ಅವರ ವಿವಾಹವು ನಡೆಯಲಿದೆ. ವಧುವರರು ಆ ನೆನಪಿಗಾಗಿ ಪಕ್ಷಕ್ಕೆ 15 ರೂಗಳನ್ನು ಕಾಣಿಕೆಯಾಗಿ ನೀಡಿದ್ದಾರೆ. ಅವರಿಗೆ ಐಕ್ಯರಂಗದ ಶುಭಾಶಯಗಳು.

○

ಆರ್ಥಿಕ ಸಮೀಕ್ಷೆ:

(3ನೇ ಪುಟದಿಂದ)

ಲಾಲ್ ಮುಂತಾದ ಕುಟುಂಬಗಳು ಒಡೆದು ಪ್ರತ್ಯ ಪ್ರತ್ಯೇಕ ಕುಟುಂಬಗಳಾಗಿ ಕೈಗಾರಿಕಾಸಂಸ್ಥೆಗಳನ್ನು ನಿಯಂತ್ರಿಸಲು ನಿಶ್ಚಯಿಸುತ್ತಿವೆ.

ಇನ್ನು ಸಾರ್ವಜನಿಕ ಕ್ಷೇತ್ರದಲ್ಲಿರುವ ಅದಕ್ಷತೆ, ನಷ್ಟ, ಮುಂತಾದ ಅಪವಾದಗಳನ್ನು ಸ್ವಲ್ಪ ವಿಶ್ಲೇಷಿಸೋಣ. ಆರ್ಥಿಕ ರಂಗದಲ್ಲಿ ಸಾಕಷ್ಟು ಬಂಡವಾಳವೂ, ತಂತ್ರಜ್ಞಾನವೂ, ಮುಂದಾಳುಗಳೂ ಪ್ರಾರಂಭದಲ್ಲಿ ಇಲ್ಲದಿದ್ದುದರಿಂದ, ಬಂಡವಾಳಗಾರರ ಮತ್ತು ಭೂಮಾಲಕರ ಪ್ರಾತಿನಿಧ್ಯ ಪಡೆದಿರುವ ಆಗಿನ ಕಾಂಗ್ರೆಸ್ ಸರಕಾರವೇ ಕೆಲವೊಂದು ಮುಖ್ಯ ಕಾರ್ಯಕ್ಷೇತ್ರಗಳನ್ನು ಯೋಜನೆಯ ಬೇರೆ ಬೇರೆ ಹಂತಗಳಲ್ಲಿ ವಹಿಸಿಕೊಂಡು, ಬಂಡವಾಳಶಾಹಿ ಪದ್ಧತಿಯ ಆರ್ಥಿಕ ಬೆಳವಣಿಗೆಗೆ ತಾನೇ ಅತ್ಯಂತ ದೊಡ್ಡ ಮುಂದಾಳಾಯಿತು. ಸಾರ್ವಜನಿಕ ಕ್ಷೇತ್ರದಲ್ಲಿರುವ ಉಕ್ಕು, ಪೆಟ್ರೋಲಿಯಂ, ಭಾರೀ ಯಂತ್ರಾಗಾರಗಳು, ನಿರಾವರಿ, ವಿದ್ಯುತ್, ಸಾರಿಗೆ ಸಂಪರ್ಕಗಳು, ವಿಮೆ, ಬ್ಯಾಂಕು, ಕೆಲವು ವಿಷಯಗಳಲ್ಲಿ ದೇಶವಿದೇಶಗಳಲ್ಲಿನ ಸಾರಿಗೆ ಮತ್ತು ವ್ಯಾಪಾರ, ವೈಜ್ಞಾನಿಕ ಶಾಂತ್ರಿಕ-ಆಡಳಿತ-ಅನ್ವೇಷಣಾ ಸಂಸ್ಥೆಗಳು, ಈದಿಸೆಯಲ್ಲಿ, ಖಾಸಗೀಕ್ಷೇತ್ರಕ್ಕೆ ಪೂರಕವಾಗಿವೆಯೇ ಹೊರತು ಮಾರಕವಾಗಿ ಅಥವಾ ಪ್ರತಿಸ್ಪರ್ಧಿಯಾಗಿರುವುದಿಲ್ಲ. ಖಾಸಗೀ ಕ್ಷೇತ್ರವು ಪ್ರಬಲವಾದಂತೆ, ಸರಕಾರವು ಅದನ್ನು ಸಾರ್ವಜನಿಕ ಕ್ಷೇತ್ರದೊಂದಿಗೆ 'ಜಂಟಿಕ್ಷೇತ್ರ'ದಲ್ಲಿ ಭಾಗವಹಿಸಲು ಸ್ವಾಗತಿಸುವುದು. ಕೆಲವು ಕಾರ್ಯಕ್ಷೇತ್ರಗಳನ್ನು ಕಾಲಕ್ರಮೇಣ ಸಾರ್ವಜನಿಕ ಕ್ಷೇತ್ರದಿಂದ ಖಾಸಗೀ ಕ್ಷೇತ್ರಕ್ಕೆ ಬಿಟ್ಟುಕೊಡಲಾಗುವುದು. ಖಾಸಗೀ ಕ್ಷೇತ್ರದ ವಿಸ್ತರಣೆಯೂ ಸಾರ್ವಜನಿಕ ಕ್ಷೇತ್ರದ ವಿಸ್ತರಣೆಯನ್ನೇ ಬಹಳವಾಗಿ ಹೊಂದಿಕೊಂಡಿದೆ. ಈ ಉಭಯ ಕ್ಷೇತ್ರಗಳ ಪಾತ್ರದಲ್ಲಿ ಗಂಭೀರವಾದ ಯಾವ ಸೈದ್ಧಾಂತಿಕ ವಿರೋಧವೂ ಇಲ್ಲ.

ಖಾಸಗೀರಂಗದಲ್ಲಿರುವ ಭೂಮಾಲಕರು, ವ್ಯಾಪಾರಿಗಳು, ಬಂಡವಾಳಗಾರರು ದೇಶದ ಸಂಪನ್ಮೂಲಗಳನ್ನು ಮಾರುಕಟ್ಟೆ ಮುಂತಾದವುಗಳನ್ನು ಹಂಚಿಕೊಳ್ಳುವಾಗ ಅವರೊಳಗೆ ಉದ್ಭವಿಸುವ ಘರ್ಷಣೆಗಳನ್ನು ನಿವಾರಿಸುವ ಹೊಣೆಗಾರಿಕೆಯೂ ಸಾರ್ವಜನಿಕ ಕ್ಷೇತ್ರದ್ದಾಗಿರುತ್ತದೆ. ಅಭಿವೃದ್ಧಿ ಹೊಂದುತ್ತಿರುವ ಎಲ್ಲಾ ದೇಶಗಳಲ್ಲಿಯೂ, ಸಮಾಜವಾದಿ ರಾಷ್ಟ್ರಗಳನ್ನು ಹೊರತು, ಇದೇ ಮಾದರಿಯನ್ನು ಅನುಸರಿಸಲಾಗುತ್ತಿದೆ. 'ಸಾರ್ವಜನಿಕ ಕ್ಷೇತ್ರವು ತನ್ನ ಬಂಡವಾಳ ಹೂಡಿಕೆಯ ಮೇಲೆ ಭಾರೀ ನಷ್ಟವನ್ನು ಅನುಭವಿಸುತ್ತಿರುವುದೇನೋ ನಿಜ. ಅದಕ್ಕೆ ಸರಕಾರದ ಧೋರಣೆಯೇ ಕಾರಣ. ಅವುಗಳ ಉತ್ಪಾದನಾ ವಸ್ತುಗಳು ಮತ್ತು ಸೇವಾ ಸೌಲಭ್ಯಗಳು ಸುಲಭ ಬೆಲೆಗೆ ಖಾಸಗೀ ಕ್ಷೇತ್ರಕ್ಕೆ ದೊರಕುವಂತೆ ಸರಕಾರವು ನೂರಾರು ಕೋಟಿ ಸಹಾಯ ನಿಧಿ ನೀಡಿ ನಷ್ಟ ಭರತಿ ಮಾಡುತ್ತಿದೆ. ಸರಕಾರದ ಅಡಿಗಲ್ಲುಗಳಾದ ಬಂಡವಾಳಗಾರರೂ ಭೂಮಾಲಕರೂ ಸಾರ್ವಜನಿಕ ಕ್ಷೇತ್ರದ ಸಂಸ್ಥೆಗಳ ಧ್ಯೇಯ ಧೋರಣೆಗಳ ಮೇಲೆ ಸದಾ ತಮ್ಮ ಒತ್ತಾಯವನ್ನು ಹೇರುತ್ತಿರುವರು, ವರ್ಚಸ್ಸನ್ನು ಬಿರುತ್ತಿರುವರು. ಪರಿಣಾಮವಾಗಿ, ಈ ಸಂಸ್ಥೆಗಳಲ್ಲಿ ಖಾಸಗೀ ಲಾಭಗಳಿಕೆಯ ಉದ್ದೇಶವೂ ಇರುವುದಿಲ್ಲ. ಸಮಾಜವಾದಿ ದೇಶಗಳಲ್ಲಿರುವಂತೆ, ಈ ಸಂಸ್ಥೆಗಳ ಕಾರ್ಯನಿರ್ವಹಣೆಯಲ್ಲಿ ಕಾರ್ಮಿಕರ ನಿಯಂತ್ರಣ ಹಾಗೂ ಮೇಲ್ವಿಚಾರಣೆಗಳಿಗೂ ಅವಕಾಶವಿಲ್ಲ. ರಾಷ್ಟ್ರೀಕರಣದಲ್ಲಿ ನಂಬುಗೆ ಇಲ್ಲದಿರುವ ರಾಷ್ಟ್ರೀಕೃತ ಸಂಸ್ಥೆಗಳಲ್ಲಿ ಮೊದಲಿದ್ದ ಅಧಿಕಾರಿಗಳಿಂದಲೂ, ಸರಕಾರಿ ಅಧಿಕಾರಿಗಳಿಂದಲೂ ಈ ಸಂಸ್ಥೆಗಳು ನಡೆಸಲ್ಪಡುವುದರಿಂದ ಧಕ್ಷತೆಯ ಅಭಾವದಿಂದಾಗಿಯೂ ನಷ್ಟ ಸಂಭವಿಸುವುದುಂಟು. ಇತ್ತೀಚೆಗೆ ಖಾಸಗೀರಂಗದಲ್ಲಿರುವ ರೋಗಗ್ರಸ್ತ ಹಾಗೂ ಭಾರೀ ನಷ್ಟದಲ್ಲಿರುವ ಕೈಗಾರಿಕಾ ಸಂಸ್ಥೆಗಳನ್ನೂ ರಾಷ್ಟ್ರೀಕರಣಗೊಳಿಸುತ್ತಿರುವುದರಿಂದಲೂ ಸಾರ್ವಜನಿಕ ಕ್ಷೇತ್ರವು ನಷ್ಟ ಅನುಭವಿಸುತ್ತಿದೆ. ಸಾರ್ವಜನಿಕ ಕ್ಷೇತ್ರದ ನಷ್ಟವು ಖಾಸಗೀಕ್ಷೇತ್ರದ ಲಾಭ. ಸರಕಾರವು ಈ ನಷ್ಟವನ್ನು ಜನಸಾಮಾನ್ಯರ ಮೇಲೂ ದುಡಿಯುವ ಜನರ ಮೇಲೂ ಹೇರುತ್ತಿದೆ.

ಸಾರ್ವಜನಿಕ ಕ್ಷೇತ್ರವು ಬೃಹದಾಕಾರವಾಗಿ ಬೆಳೆದರೂ, 1973-74ರಲ್ಲಿಯೂ ಈ ಕ್ಷೇತ್ರದ ಒಟ್ಟು ಉತ್ಪಾದನಾ ಮೌಲ್ಯವು ರಾಷ್ಟ್ರೀಯ ಒಟ್ಟು ಉತ್ಪಾದನಾ ಮೌಲ್ಯದ ರೂ. 424, 430 ಮಿಲಿಯದ ಶೇ. 16.2 ರಷ್ಟೇ ಆಗಿತ್ತು. ಖಾಸಗೀಕ್ಷೇತ್ರದ ಒಟ್ಟು ಉತ್ಪಾದನೆಯ ಮೌಲ್ಯವು ಶೇ. 83.8 ರಷ್ಟಾಗಿತ್ತು. (ಆಧಾರ: India, 1976). ಆದುದರಿಂದ, ಸಾರ್ವಜನಿಕ ಕ್ಷೇತ್ರವು ಸಮಾಜವಾದಿ ವ್ಯವಸ್ಥೆಯತ್ತ ಸಾಗಲು ಸಹಕಾರಿಯಾಗಿದೆ ಎಂಬ ವಾದವೂ ಹುರುಳಿಲ್ಲದ್ದಾಗಿದೆ. ಅಭಿವೃದ್ಧಿ ಹೊಂದಿದ ಅಮೆರಿಕದ ಸಂಯುಕ್ತ ಸಂಸ್ಥಾನ, ಇಂಗ್ಲೆಂಡ್, ಜರ್ಮನಿ, ಫ್ರಾನ್ಸ್ ದೇಶಗಳಲ್ಲಿಯೂ ಬೃಹತ್ ಸಾರ್ವಜನಿಕ ಕ್ಷೇತ್ರವಿರುವುದಾದರೂ, ಅವುಗಳು ಬಂಡವಾಳಶಾಹಿರಾಷ್ಟ್ರಗಳಾಗಿವೇ ಹೊರತು ಸಮಾಜವಾದಿ ರಾಷ್ಟ್ರಗಳಾಗಲಿಲ್ಲ. ಎಲ್ಲಾ ಬಂಡವಾಳಶಾಹಿ ರಾಷ್ಟ್ರಗಳಲ್ಲಿಯೂ ಪ್ರಬಲವಾದ ಸಾರ್ವಜನಿಕ ಕ್ಷೇತ್ರವಿರುವುದು ಅನಿವಾರ್ಯವೇ ಆಗಿದೆ.

ರಾಷ್ಟ್ರೀಕರಣವನ್ನು ಬೆಂಬಲಿಸಲು ಕಾರಣ :

ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯಲ್ಲಿ ಸಾರ್ವಜನಿಕ ಕ್ಷೇತ್ರದ ನೈಜ ಪಾತ್ರವನ್ನು ಬಹಿರಂಗಗೊಳಿಸುವುದರೊಂದಿಗೇ, ಜನತಾ ನಾಯಕರ ಸಧ್ಯದ ರಾಷ್ಟ್ರೀಕರಣದ ಉದ್ದೇಶವು ಸಂಕುಚಿತವೂ ಸಂದರ್ಭಸಾಧಕವೂ ಆಗಿರುವುದಾದರೂ, ಉದ್ದೇಶಿತ ರಾಷ್ಟ್ರೀಕರಣವನ್ನು ನಾವು ಬೆಂಬಲಿಸುತ್ತೇವೆ. ಕಾರಣ, ಅಂತಹ ರಾಷ್ಟ್ರೀಕೃತ ಸಂಸ್ಥೆಗಳ ಮೇಲೆ ಪಾರ್ಲಿಮೆಂಟಿನ ನಿಯಂತ್ರಣವಿರುವುದು. ವೈಯಕ್ತಿಕ ಬಂಡವಾಳಶಾಹಿಗಳು ಹಾಗೂ ಭೂಮಾಲಕರು ರಾಷ್ಟ್ರೀಕೃತ ಸಂಸ್ಥೆಗಳನ್ನು ನೇರವಾಗಿ ತಮ್ಮ ಸ್ವಾರ್ಥಸಾಧನೆಗೆ ಬಳಸಿಕೊಳ್ಳುವುದು ಕಷ್ಟವಾಗುವುದು. ರಾಷ್ಟ್ರೀಕೃತ ಸಂಸ್ಥೆಗಳ ಕಾರ್ಯಕಲಾಪಗಳ ಮತ್ತು ಧ್ಯೇಯೋದ್ದೇಶಗಳ ಕುರಿತು ಪ್ರಜಾಸತ್ತಾತ್ಮಕ ಚಳುವಳಿಯು ಸಾಕಷ್ಟು ಜನಜಾಗ್ರತಿಯನ್ನುಂಟುಮಾಡಬಹುದು ರಾಷ್ಟ್ರೀಕೃತ ಸಂಸ್ಥೆಗಳಲ್ಲಿ ಕಾರ್ಮಿಕ ಸಂಘಟನೆಯನ್ನು ಪರಿಣಾಮಕಾರಿಯಾಗಿ ನಡೆಸಿ ಶೋಷಣೆಯ ವಿರುದ್ಧ ಪ್ರಬಲವಾಗಿ ಹೋರಾಡಬಹುದು ಮತ್ತು ರಾಜ್ಯ ಪ್ರಭುತ್ವದ ನಿಜರೂಪವನ್ನು ಬಹಿರಂಗಗೊಳಿಸಬಹುದು. ಬಹುರಾಷ್ಟ್ರೀಯ ಸಂಸ್ಥೆಗಳನ್ನೂ, ವಿದೇಶಿ ಬಂಡವಾಳವನ್ನೂ, ಸ್ವದೇಶಿ ಗುತ್ತೇದಾರಿ ಬಂಡವಾಳವನ್ನೂ ರಾಷ್ಟ್ರೀಕರಿಸಿ ಅವುಗಳ ಕಾರ್ಯಕಲಾಪಗಳ ಮೇಲೆ ಕಾರ್ಮಿಕ ಸಂಘಟನೆಗಳ ಮತ್ತು ಪ್ರಜಾಸತ್ತಾತ್ಮಕ ರಾಜಕೀಯ ಪಕ್ಷಗಳ ನಿಯಂತ್ರಣ ಹಾಗೂ ಮೇಲ್ವಿಚಾರಣೆ ಇರಬೇಕೆನ್ನುವುದು ಪ್ರಜಾಸತ್ತಾತ್ಮಕ ಚಳುವಳಿಯ ಬೇಡಿಕೆಯೂ ಆಗಿದೆ. ಪ್ರತಿಯೊಂದು ಕೈಗಾರಿಕೆಯ ರಾಷ್ಟ್ರೀಕರಣವನ್ನು ಬೆಂಬಲಿಸುವಾಗಲೂ ರಾಷ್ಟ್ರೀಕರಣದ ವಿರುದ್ಧವಾದ ಬಂಡವಾಳಶಾಹಿಗಳ ಅಪಪ್ರಚಾರವನ್ನು ತೊಡೆದುಹಾಕಲು ಅವಕಾಶ ಸಿಗುವುದು. ಇದರಿಂದ, ಬಂಡವಾಳಶಾಹಿಪದ್ಧತಿಯು ತನ್ನ ಅಂತರಿಕ ವೈರುಧ್ಯವನ್ನು ಹೋಗಲಾಡಿಸಿಕೊಳ್ಳಲು ಅಸಮರ್ಥವಾದಾದಂತೆ, ದುಡಿಯುವ ಜನರು ಸಮಾಜದ ಉತ್ಪಾದನಾ ಸಂಬಂಧದಲ್ಲಿ ಮೂಲಭೂತವಾದ ಬದಲಾವಣೆಯನ್ನು ಬರಮಾಡಲು ಹೆಚ್ಚು ಪ್ರಜ್ಞಾವಂತರಾಗುವರು.

●

ಮೇ ದಿನದಂದು ಸರಕಾರಿ ರಬ್ಬರ್ ತೋಟ ಕಾರ್ಮಿಕರ ಸತ್ಯಾಗ್ರಹ

ಕರ್ನಾಟಕ ಸರಕಾರದ ಒಡೆತನದಲ್ಲಿ ದ. ಕ. ಜಿಲ್ಲೆಯ ಸುಳ್ಯ ಮತ್ತು ಪುತ್ತೂರು ತಾಲ್ಲೂಕುಗಳಲ್ಲಿ 6 ಡಿವಿಜನ್‌ಗಳಲ್ಲಿ ಸುಮಾರು 10,000 ಎಕ್ರೆ ರಬ್ಬರ್ ತೋಟವಿದೆ. ಈ ತೋಟದಲ್ಲಿ ಸುಮಾರು 5000 ಕೆಲಸಗಾರರು ದುಡಿಯುತ್ತಿದ್ದಾರೆ. ಇವರಲ್ಲಿ ನೂರಕ್ಕೆ 90 ರಷ್ಟು ಮಂದಿ ಸಿಲೋನ್ ನಿರ್ವಾಸಿತರಾಗಿರುತ್ತಾರೆ. ಈ ತೋಟಗಳಲ್ಲಿ ಸರಕಾರವು ಪ್ಲಾಂಟೇಷನ್ ಲೇಬರ್ ಕಾನೂನುಗಳನ್ನು ಇನ್ನೂ ಸಂಪೂರ್ಣವಾಗಿ ಜಾರಿಮಾಡಿಲ್ಲ. ಖಾಸಗಿ ತೋಟದ ಮಾಲೀಕರು ಕೊಡುವ ಸೌಕರ್ಯಗಳನ್ನೂ ಈ ತೋಟದ ಕೆಲಸಗಾರರಿಗೆ ನಿರಾಕರಿಸಲಾಗಿದೆ. ಈ ತೋಟವನ್ನು ನಡೆಸುವ ಅರಣ್ಯ ಇಲಾಖೆಯಲ್ಲಿ ದುರ್ವ್ಯವಹಾರ ಮತ್ತು ಮೋಸಗಳು ತಾಂಡವವಾಡುತ್ತಿವೆ. ಯಾವುದೇ ಒಪ್ಪಂದಗಳನ್ನು ಇವರು ಜಾರಿಮಾಡುತ್ತಿಲ್ಲ. ಈ ಕಾರ್ಮಿಕರು ಸಿ. ಐ. ಟಿ. ಯು. ಗೆ ಸೇರಿದ ತೋಟಕೆಲಸಗಾರರ ಸಂಘದ ನೇತೃತ್ವದಲ್ಲಿ ಸಂಘಟಿತರಾಗಿದ್ದಾರೆ.

ತಾ. 25-3-79ರಂದು ನಡೆದ ತೋಟಕೆಲಸಗಾರರ ಸಭೆಯಲ್ಲಿ ಈ ಕಾರ್ಮಿಕರ 22 ಬೇಡಿಕೆಗಳ ಪಟ್ಟಿಯನ್ನು ಅಂಗೀಕರಿಸಿ ಮ್ಯಾನೇಜ್‌ಮೆಂಟಿಗೆ ಕಳುಹಿಸಲಾಗಿದೆ.

ಬೇಡಿಕೆಗಳು :-

1. ಎಲ್ಲಾ 6 ಡಿವಿಜನ್ನಿನ ಕಾರ್ಮಿಕರಿಗೆ ಶೇಕಡ 15ರಂತೆ ಬೋನಸ್‌ಅನ್ನು 1977-78 ಮತ್ತು 78-79ರ ಸಾಲಿಗೆ ಕೊಡಬೇಕು.

2. 1-10-77ರಂದು ನಡೆದ ಕೈಗಾರಿಕಾ ಒಪ್ಪಂದದಂತೆ ಬಾಕಿಯಾದ ಸಂಬಳವನ್ನು ಕೂಡಲೇ ಕೊಡಬೇಕು.

3. ಎಲ್ಲಾ ಕೆಲಸಗಾರರಿಗೆ ತಿಂಗಳ ಸಂಬಳ ರೂ. 350ರಂತೆ ಕೊಡಬೇಕು.

4. ತೋಟಗಳಲ್ಲಿ ಮತ್ತು ರಬ್ಬರ್ ಕಾರ್ಖಾನೆಯಲ್ಲಿ ದುಡಿಯುವ ಎಲ್ಲಾ ಕಾರ್ಮಿಕರನ್ನು ಖಾಯಂನೌಕರರಾಗಿ ಪರಿಗಣಿಸಬೇಕು.

5. ಪ್ಲಾಂಟೇಷನ್ ಲೇಬರ್ ಆಕ್ಟನ್ನು ಜಾರಿಗೊಳಿಸಬೇಕು.

6. ಎಲ್ಲಾ ಅರ್ಹಕೆಲಸಗಾರರನ್ನು ಪ್ರಾವಿಡೆಂಟ್ ಫಂಡ್ ಸ್ಕೀಮಿನ ಒಳಗೆ ತರಬೇಕು.

7. ಎಲ್ಲಾ ಕೆಲಸಗಾರರಿಗೆ ಹೆಂಗಸು ಗಂಡಸರೆಂಬ ಭೇದವಿಲ್ಲದೆ ಸಮಾನ ವೇತನ ಜಾರಿಗೊಳಿಸಬೇಕು.

8. ಕನಿಷ್ಠ ರಬ್ಬರ್ ತೆಗೆಯುವ ಮಿತಿಯನ್ನು ಕಡಿಮೆಗೊಳಿಸಬೇಕು.

9. ಎಲ್ಲಾ ಕೆಲಸಗಾರರಿಗೆ 2 ಜತೆ ಸಮವಸ್ತ್ರ ಮತ್ತು 1 ಜತೆ ಎಕ್ಕಡ ಒದಗಿಸಬೇಕು.

10. ಮೇ ದಿನವನ್ನು ರಜಾದಿನವಾಗಿ ಘೋಷಿಸಿ ಆ ದಿನದ ಸಂಬಳ ಕೊಡಬೇಕು.

ಇದಲ್ಲದೆ ಇತರ 12 ಬೇಡಿಕೆಗಳನ್ನು ಮುಂದಿಟ್ಟರೂ ಸರಕಾರ ಮತ್ತು ಆಡಳಿತ ವರ್ಗವು ಕಿವುಡಾಗಿರುವುದರಿಂದ ತಾ. 1-5-79ರಂದು ಸಾವಿರಾರು ಕಾರ್ಮಿಕರು ಆಡಳಿತ ಕಛೇರಿ ಎದುರು ಬೃಹತ್ ಮತ ಪ್ರದರ್ಶನ ಮತ್ತು ಸತ್ಯಾಗ್ರಹ ನಡೆಸಲು ತೀರ್ಮಾನಿಸಿದ್ದಾರೆ. ●

ಸಿ.ಐ.ಟಿ.ಯು. ಸಮ್ಮೇಳನ

[ಒಂದನೇ ಪುಟದಿಂದ]

ಅಸೋಸಿಯೇಷನ್, ಬಿ. ಎಂ. ಎಸ್, ಯು. ಟಿ. ಯು. ಸಿ, ಎಚ್. ಎಂ. ಎಸ್, ಮತ್ತು ಡಿ. ಎಂ. ಕೆ. ಯ ಲೇಬರ್ ಪ್ರೋಗ್ರೆಸಿವ್ ಫೆಡರೇಷನ್ ಸಮ್ಮೇಳನಕ್ಕೆ ಶುಭಕೋರಿ ಸಂದೇಶಗಳನ್ನು ಕಳುಹಿಸಿದ್ದವು. ಎ. ಐ. ಟಿ. ಯು. ಸಿ. ಯ ಸೌಹಾರ್ದ ಪ್ರತಿನಿಧಿಗಳ ತಂಡದ ಪರವಾಗಿ ಕೆ. ಟಿ. ಕೆ. ತಂಗಮಣಿಯವರು ಭಾಷಣಮಾಡಿ ಸಂದೇಶ ಕೊಟ್ಟರು.

'ಅಲ್ ಇಂಡಿಯಾ ಕಿಸಾನ್ ಸಭಾ'ದ ಪರವಾಗಿ ಲಿಖಿತ ಸೌಹಾರ್ದ ಸಂದೇಶವನ್ನು ಸಭಾದ ಉಪಾಧ್ಯಕ್ಷ ಕಾಮ್ರೇಡ್ ಹರ್‌ಕಿಶನ್‌ಸಿಂಗ್ ಸುರ್ಜಿತ್‌ರವರು ಓದಿದರು.

ಎಸ್. ಎಫ್. ಐ. ಅಧ್ಯಕ್ಷ ಕಾಮ್ರೇಡ್ ಎಂ. ಎ. ಬೇಬಿ ಸಮ್ಮೇಳನಕ್ಕೆ ಶುಭಕೋರಿ ಭಾಷಣ ಮಾಡಿದರು.

1975ರ ಮೇ ನಲ್ಲಿ ಮುಂಬೈನಲ್ಲಿ ನಡೆದ ಮೂರನೆಯ ಅಖಿಲಭಾರತ ಸಮ್ಮೇಳನದ ನಂತರ ಈ ವರೆಗೆ ನಡೆದಿರುವ ಐಕ್ಯಹೋರಾಟಗಳನ್ನು ಕುರಿತು ಪ್ರಧಾನ ಕಾರ್ಯದರ್ಶಿ ಕಾಂ. ಪಿ. ರಾಮಮೂರ್ತಿಯವರು ವರದಿ ಮಾಡಿದರು.

ಸಿ. ಐ. ಟಿ. ಯು.ವಿನ ಸಂಘಟನೆ ಮತ್ತು ಚಟುವಟಿಕೆಗಳ ಬಗ್ಗೆ ಕಾರ್ಯದರ್ಶಿ ಕಾಂ. ಎಂ. ಕೆ. ಪಂಧೆಯವರು ವರದಿ ಕೊಟ್ಟರು.

ಸಮ್ಮೇಳನದಲ್ಲಿ ನಮ್ಮ ದೇಶದ 1473 ಕಾರ್ಮಿಕಸಂಘಗಳನ್ನು ಪ್ರತಿನಿಧಿಸಿದ 3861 ಪ್ರತಿನಿಧಿಗಳು-ಇವರಲ್ಲಿ 156 ಮಹಿಳೆಯರು ಭಾಗವಹಿಸಿದ್ದರು.

ಸಮ್ಮೇಳನವು ಮುಂದಿನ ಅವಧಿಗೆ ಕಾಂ. ಬಿ. ಟಿ. ರಣದಿವೆಯವರನ್ನು ಅಧ್ಯಕ್ಷರನ್ನಾಗಿಯೂ, ಕಾಂ. ಪಿ. ರಾಮಮೂರ್ತಿಯವರನ್ನು ಪ್ರಧಾನ ಕಾರ್ಯದರ್ಶಿಯನ್ನಾಗಿಯೂ, ಕಾಂ. ಸಮರ್ ಮುಖರ್ಜಿಯವರನ್ನು ಖಜಾಂಚಿಯವರನ್ನಾಗಿಯೂ ಚುನಾಯಿಸಿತು. ಕಾಂ. ಜ್ಯೋತಿಬಸು, ಕಾಂ. ಮಹಮದ್ ಇಸ್ಮಾಯಿಲ್, ಕಾಂ. ಸುಹ್ರಿದ್ ಮಲ್ಲಿಕ್ ಚೌಧುರಿ, ಕಾಂ. ಸುಶೀಲಾ ಗೋಪಾಲನ್, ಕಾಂ. ಕೆ. ರಮಣಿ, ಕಾಂ. ಸುಧೀನ್‌ಕುಮಾರ್, ಕಾಂ. ಎಸ್. ವೈ. ಕೋಲಾಟ್ಕರ್, ಕಾಂ. ಸಿ. ಕಣ್ಣನ್ ಮತ್ತು ಕಾಂ. ಮನೋರಂಜನ್ ರಾಯ್ ಉಪಾಧ್ಯಕ್ಷರುಗಳಾಗಿಯೂ, ಕಾಂ. ಎಂ. ಕೆ. ಪಂಧೆ, ಕಾಂ. ಇ. ಬಾಲಾನಂದನ್, ಕಾಂ. ಕಮಲ್ ಸರ್ಕಾರ್, ಕಾಂ. ನಿರೇನ್ ಘೋಷ್, ಕಾಂ. ಮೋಹನ್ ಪುನಾಮಿಯಾ, ಕಾಂ. ನೃಪಿಂಗ್ ಚಕ್ರವರ್ತಿ ಮತ್ತು ಕಾಂ. ಶಾಂತಿ ಶೇಖರ್ ಬೋಸ್ ಕಾರ್ಯದರ್ಶಿಗಳಾಗಿಯೂ ಸಮ್ಮೇಳನದಲ್ಲಿ ಸರ್ವಾನುಮತದಿಂದ ಚುನಾಯಿತರಾದರು.

ಕರ್ನಾಟಕದಿಂದ ಕಾಂ. ಎಸ್. ಸೂರ್ಯನಾರಾಯಣರಾವ್, ಕಾಂ. ಸಿ. ನಂಜುಂಡಪ್ಪ, ಕಾಂ. ಟಿ. ಎಸ್. ಮಣಿ, ಕಾಂ. ಪಿ. ರಾಮಚಂದ್ರರಾವ್, ಕಾಂ. ಎ. ಜಾನಪ್ಪ, ಕಾಂ. ಮಹಮದ್ ದಸ್ತಗೀರ್, ಕಾಂ. ವಿ. ಜೆ. ಕೆ. ನಾಯರ್, ಕಾಂ. ಕೆ. ಮೂಸಬ್ಬ ಮತ್ತು ಕಾಂ. ಎಸ್. ಕೆ. ಉಪಾಧ್ಯಾಯರು ಸಿ. ಐ. ಟಿ. ಯು. ಜನರಲ್ ಕೌನ್ಸಿಲ್ ಸದಸ್ಯರಾಗಿ ಚುನಾಯಿತರಾಗಿದ್ದಾರೆ. ಕಾಂ. ಎಸ್. ಸೂರ್ಯನಾರಾಯಣರಾವ್ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದಾರೆ. ●

ಕೇರಳ ಪತ್ರ :

(6ನೇ ಪುಟದಿಂದ)

1ಲಕ್ಷ ಸ್ವಯಂ ಸೇವಕರು ಬಂಧಿತರಾದರು.

ರಾಜ್ಯ ಸಮ್ಮೇಳನದ ಬೇಡಿಕೆಗಳು:

1. ಕೃಷಿ ಉತ್ಪನ್ನಗಳಿಗೆ ಸರಿಯಾದ ಬೆಲೆ ನಿಗದಿ ಮಾಡಲು ಹಾಗೂ ಕೃಷಿಕರಿಗೆ ಬೇಕಾದ ವಸ್ತುಗಳನ್ನು ಒದಗಿಸಲು ತಾಲ್ಲೂಕಿಗೆ ಒಂದರಂತೆ ಕೃಷಿ ಡಿಪೋಗಳನ್ನು ತೆರೆಯುವುದು.

2. ವಾರ್ಷಿಕ ಆದಾಯ 3,600 ರೂಪಾಯಿಗಿಂತ ಕಡಿಮೆ ಇರುವ ಕೃಷಿಕರ ಸಾಲಗಳನ್ನು ರದ್ದುಗೊಳಿಸುವುದು.

3. 3,600 ರೂಪಾಯಿಯಿಂದ 10,000 ರೂಪಾಯಿ ಆದಾಯವಿರುವ ಕೃಷಿಕರಿಗೆ ಸಾಲ ಮರುಪಾವತಿ ಮಾಡಲು ದೀರ್ಘಾವಧಿ ಕಂತಿನ ಸೌಲಭ್ಯ ಹಾಗೂ ಬಡ್ಡಿಯನ್ನು ಶೇಕಡ ಐದುವರೆಗಿಂತ ಕಡಿಮೆ ಮಾಡಬೇಕು.

3 ಹೆಚ್ಚಿನ ಹೊಸ ತೆರಿಗೆಗಳಾದ ಜಲ ತೆರಿಗೆ, ಜಮೀನು ಸೆಸ್ಸು ಮುಂತಾದುವನ್ನು ಹಿಂತೆಗೆಯಬೇಕು.

4. ಸರಕಾರ 'ಇಷ್ಟದಾನ' ನಿಯಮವನ್ನು ವಾಪಸು ತೆಗೆದುಕೊಳ್ಳಬೇಕು, ಮಿಗತೆ ಭೂಮಿಯನ್ನು ಭೂರಹಿತರಿಗೆ ವಿತರಣೆ ಮಾಡಬೇಕು. ವಿತರಣೆ ಸಮಿತಿಗಳಲ್ಲಿ ರೈತ-ಕಾರ್ಮಿಕರ ಪ್ರತಿನಿಧಿಗಳಿರಬೇಕು.

5. ರಬ್ಬರ್, ಕೊಬ್ಬರಿ, ತೆಂಗಿನ ಎಣ್ಣೆ ಮೊದಲಾದುವುಗಳನ್ನು ಆಮದು ಮಾಡಿಕೊಳ್ಳಲು ಕೊಟ್ಟಿರುವ ಅನುಮತಿಯನ್ನು ವಾಪಸು ಪಡೆಯಬೇಕು. ಈ ಬೆಳೆಗಳಿಗೆ ಸರಿಯಾದ ಬೆಲೆಯನ್ನು ನಿಶ್ಚಯಿಸಬೇಕು.

6. ನೀರಾವರಿ ಯೋಜನೆ ಪ್ರದೇಶದಿಂದ ಒಕ್ಕಲೆಬ್ಬಿಸುತ್ತಿರುವ ರೈತರಿಗೆ ಕೂಡಲೇ ಪರಿಹಾರ ಹಾಗೂ ಭೂಮಿಯನ್ನು ಕೊಡತಕ್ಕದ್ದು. ಪ್ರತಿಫಲ ಕೊಡದೆ ಒಕ್ಕಲೆಬ್ಬಿಸಬಾರದು.

7. ನೈಸರ್ಗಿಕ ಹಾವಳಿಗಳಿಂದ ರೈತರಿಗೆ ಉಂಟಾಗುವ ನಷ್ಟವನ್ನು ತುಂಬಿಕೊಡಲು ಅಥವಾ ಪರಿಹಾರ ಒದಗಿಸಲು ಸರಕಾರ ಸೂಕ್ತ ವ್ಯವಸ್ಥೆ ಮಾಡಬೇಕು.

ಮೇಲ್ಕಾಣಿಸಿದ ಬೇಡಿಕೆಗಳ ಜೊತೆ ರೈತರ ಇತರ ಬೇಡಿಕೆಗಳಿಗಾಗಿ ಬೇರೆ, ಬೇರೆ ಕೃಷಿಕ ಸಂಘಗಳನ್ನು ಸೇರಿಸಿಕೊಂಡು ರಾಜ್ಯಮಟ್ಟದ ಹೋರಾಟಕ್ಕೆ ತಯಾರಾಗಲು ಸಮ್ಮೇಳನ ಕರೆನೀಡಿತು. ●

ವಿಯೆಟ್ನಾಂ ಶಾಂತಿ ಸಮಿತಿ ಸದಸ್ಯರಿಗೆ ಸ್ವಾಗತ

ವಿಯೆಟ್ನಾಂ ಶಾಂತಿ ಸಮಿತಿಯ ಸದಸ್ಯರುಗಳಾದ ಕಾಂ. ಫಾನ್ ಅನ್ ಮತ್ತು ಲೀದುಯಿವಾನ್ ಇವರುಗಳಿಗೆ 17-4-79 ರಂದು ಬೆಂಗಳೂರಲ್ಲಿ ರಾಜ್ಯ ಶಾಂತಿ ಮತ್ತು ಸೌಹಾರ್ದತಾ ಸಂಘಟನೆಯ ವತಿಯಿಂದ ಸ್ವಾಗತವನ್ನೀಯಲಾಯಿತು. ಅಂದು ಸಂಜೆ, ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಮುಖಂಡ ಕಾಂ. ಎಸ್. ಎಲ್. ಉಪಾಧ್ಯಾಯರೂ ಸೇರಿ ವಿವಿಧ ರಾಜಕೀಯ ಪಕ್ಷದ ಮುಖಂಡರುಗಳೂ ಮಾತನಾಡಿ ವಿಯೆಟ್ನಾಂ ಜನತೆಗೆ ಬೆಂಬಲಕೊಟ್ಟರು.

ವಿವಿಧ ಸಂಘ-ಸಂಸ್ಥೆಗಳ ಪರವಾಗಿ ಸುಮಾರು ರೂ 800/- ಬೆಲೆಬಾಳುವ ಔಷಧ ಮತ್ತಿತರ ವಸ್ತುಗಳನ್ನು ವಿಯೆಟ್ನಾಂ ಜನತೆಗೆ ಸಹಾಯಾರ್ಥವಾಗಿ ನೀಡಲಾಯಿತು.

ಸಂಪಾದಕೀಯ

(ಒಂದನೇ ಪುಟದಿಂದ)

ಕರು, ಕನಿಷ್ಟ ವೇತನಕ್ಕೆ ಹೋರಾಡಿದಾಗ, ಪೋಲೀಸರು ಕಾರ್ಮಿಕರಿಗೆ ದ್ರೋಹವೆಸಗುವ, ಕಾನೂನನ್ನು ಉಲ್ಲಂಘಿಸುವ ಮಾಲಕರ ಮೇಲೆ ಕ್ರಮ ವಹಿಸುವ ಬದಲು ಕಾರ್ಮಿಕರನ್ನೇ ಬಾಧಿಸಿದರು. ಕಾರ್ಮಿಕರು ಅವರ ಹಕ್ಕು ಪ್ರಕಾರ, ನ್ಯಾಯವಾದ ಬೇಡಿಕೆಗಳಿಗಾಗಿ ಹೋರಾಡಿದರೆ ತಪ್ಪು. ಮಾಲಕರು ಏನೇ ದ್ರೋಹವೆಸಗಿದರೂ ತಪ್ಪಲ್ಲ! ಇದು ಸರ್ವಸಾಮಾನ್ಯವಾಗಿ ಕಂಡುಬರುತ್ತಲಿದೆ. ಪೋಲೀಸ್ ಇಲಾಖೆಯ ಪಕ್ಷಪಾತ ಧೋರಣೆಯ ವಿರುದ್ಧ, ರಾಜ್ಯದಾದ್ಯಂತ ಪ್ರತಿಭಟನೆಯ ಸ್ವರ ಎಬ್ಬಿಸಬೇಕಾಗಿದೆ.

ಶ್ರೀ [..]ಸ್ ಅರಿಗೆ ನಿಜವಾಗಿಯೂ ಬಡಜನತೆಯ ಬಗ್ಗೆ ಕಾಳಜಿಯಿದ್ದರೆ, ಪಶ್ಚಿಮ ಬಂಗಾಲದ ಸರಕಾರ ಮಾಡಿದಂತೆ, ಪೋಲೀಸರನ್ನು ಜನತೆಯ ಮೇಲೆ ಛೂ ಬಿಡುವುದನ್ನು ನಿಲ್ಲಿಸಬೇಕು. ಕಾರ್ಮಿಕರ, ಬಡಜನತೆಯ ಹೋರಾಟಗಳು ನಡೆವಾಗ ಪೋಲೀಸರನ್ನು ಮಧ್ಯೆ ಪ್ರವೇಶಿಸಿ ಹೋರಾಟ ಮುರಿಯುವಂತೆ ಮಾಡುವುದನ್ನು ನಿಲ್ಲಿಸಬೇಕು. ಬದಲು ಕಾನೂನಿಗೆ ವಿರೋಧವಾಗಿ ಹೋಗುವ ಮಾಲಕರು, ಬಂಡವಾಳಗಾರರು, ಭೂಮಾಲೀಕರು-ಇವರುಗಳ ಮೇಲೆ ಕ್ರಮತೆಗೆದುಕೊಳ್ಳಬೇಕು. ●

ಪರಿಸರ

ನಾನು ಶ್ರೀಮತಿ ಇಂದಿರಾಗಾಂಧಿಯವರ ಸಂಬಂಧ ಕಡಿದುಕೊಳ್ಳುವ ಪ್ರಶ್ನೆಯೇ ಇಲ್ಲ. ಒಂದು ವೇಳೆ ಆಕೆ ನನ್ನನ್ನು ಪಕ್ಷದಿಂದ ಹೊರಹಾಕಿದರೆ ನಿಶ್ಚಿಂತೆಯಿಂದ ನನ್ನ ಊರಾದ ಹುಣಸೂರಿನ ಕಲ್ಲಹಳ್ಳಿಗೆ ಹೋಗಿ ಇದ್ದುಬಿಡುವೆ.

ದೇವರಾಜ ಅರಸು

ಮುಖ್ಯಮಂತ್ರಿಯಾಗಿದ್ದುಕೊಂಡು ಪಕ್ಷದ ವ್ಯವಹಾರಗಳಿಗೆ ಹೆಚ್ಚಿನ ಗಮನ ಕೊಡಲು ಸಾಧ್ಯವಿಲ್ಲದಿರುವುದರಿಂದ ಶ್ರೀ ದೇವರಾಜ ಅರಸು ಅವರು ಕರ್ನಾಟಕ ಪ್ರದೇಶ ಕಾಂಗ್ರೆಸ್ (ಐ) ಸಮಿತಿಯ ಅಧ್ಯಕ್ಷ ಪದವಿಯನ್ನು ತ್ಯಜಿಸಬೇಕು.

ಸಿ. ಕೆ. ಜಾಫರ್ ಷರೀಫ್, ಕಾಂಗ್ರೆಸ್ (ಐ) ಎಂ. ಪಿ.

ಅಮೇರಿಕವು ಒಂದು ರಾಜಕೀಯ ಪಕ್ಷಕ್ಕೆ ಹಣ ಒದಗಿಸುವಷ್ಟರ ಮಟ್ಟಿಗೆ ಕೇವಲ ಎರಡು ಬಾರಿ ಭಾರತದ ರಾಜಕೀಯದಲ್ಲಿ ಹಸ್ತಕ್ಷೇಪ ನಡೆಸಿತ್ತು. ಎರಡು ಬಾರಿಯೂ ಕೇರಳ ಮತ್ತು ಪ. ಬಂಗಾಳಗಳ ವಿಧಾನಸಭೆ ಚುನಾವಣೆಗಳಲ್ಲಿ ಕಮ್ಯುನಿಸ್ಟ್ ವಿಜಯದ ಹಿನ್ನೆಲೆಯಲ್ಲಿ ಇದು ನಡೆದಿತ್ತು. ಎರಡು ಬಾರಿಯೂ ಕಾಂಗ್ರೆಸ್ ಪಕ್ಷವು ಅಪೇಕ್ಷಿಸಿದ್ದರಿಂದ ಈ ಹಣವನ್ನು ನೀಡಲಾಗಿತ್ತು. ಒಮ್ಮೆ ಪಕ್ಷದ ಅಧಿಕಾರಿಯಾಗಿದ್ದ (ಕಾಂಗ್ರೆಸ್ ಅಧ್ಯಕ್ಷೆ) ಸ್ವತಃ ಶ್ರೀಮತಿ ಇಂದಿರಾಗಾಂಧಿಗೆ ಇದನ್ನು ನೀಡಲಾಗಿತ್ತು.

ಡೇನಿಯಲ್ ಪ್ಯಾಟ್ರಿಕ್ ಮೊಯ್ನಿಹಾನ್
(ಭಾರತಕ್ಕೆ ಅಮೇರಿಕದ ಮಾಜಿ ರಾಯಭಾರಿ – ಎ ಡೇಂಜರ್‌ಪ್ಲೇಸ್ ಪುಸ್ತಕದಲ್ಲಿ)

ಸರ್ವಶಕ್ತನಾದ ಭಗವಂತ ಈ ದೇಶಕ್ಕೆ ಅನುಗ್ರಹಿಸಿರುವ ಧರ್ಮದ ಪಥವನ್ನು ಅನುಸರಿಸಬೇಕೆಂದು ಪ್ರಧಾನ ಮಂತ್ರಿ ಮೊರಾರ್ಜಿದೇಸಾಯಿ ಅವರು ಇಂದು ಇಲ್ಲಿ (ದಾವಣಗೆರೆಯಲ್ಲಿ) ಜನತೆಗೆ ಕರೆಯಿತ್ತರು.

ಪ್ರಜಾವಾಣಿ ವರದಿ

ಭುಟ್ಟೋ ಮರಣದಂಡನೆಗೆ ಸಿ. ಐ. ಎ. ಮತ್ತು ಕೆಲವು ಪಾಶ್ಚಿಮಾತ್ಯ ರಾಷ್ಟ್ರಗಳು ಕಾರಣ.'

ಇಂದಿರಾಗಾಂಧಿ

ಭೂಹೀನರಿಗೆ ಭೂವಿತರಣೆಯಾದ ನಂತರ ಭೂಮಿ ಉಳಲು ಬಡರೈತರಿಗೆ ದನಗಳ ಕೊರತೆಯಾಗಬಾರದೆಂದು ಭೂದಾನನಾಯಕ ವಿನೋಬ ಭಾವೆಯವರು ಉಪವಾಸಮಾಡಿದ್ದರೆ ಅವರನ್ನು ಯಾರಾದರೂ ಶ್ಲಾಘಿಸಿರುತ್ತಿದ್ದರು.

ಓರ್ವ ಚಿಂತಕ

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist), Karnataka State Committee, L-56, K. V. Temple Street, Sultanpet, Bangalore-560 053.